ದ್ದಾರಿ, ಪರಂತು, ಯಿಂಡ್ಯ ದೇಶದಲ್ಲಿ ಖರ್ಜೂರದ ವ್ಯವಸಾಯದ ಪ್ರಕರಣವು ಮಃಖ್ಯವಾಗಿ ಬೀಜ ತರಿಸತಕ್ಕ ಬಗ್ಗೆ ತಗಲುವ ಖರ್ಚಿಗಾಗಿ ದಾಮೋಷಾಯಿ ಮೊಬಲಗನ್ನು ಕೊಡಲಿಕ್ಕೆ ————ಯವರು ಸಮರ್ಥರಾಗಿರುವರೆಂದು ನಂಬೋಣಾಗಿ ಯಿಧೆ, ಮತ್ತು ಈಗ ————ಯವರಿಗೆ ಜೇಕಾಗುವ ಬೀಜದ ತೇದಾದೂ, ವ ಅದರ ಖರೀದೀ ಲಾಗವಷೂ ವ ಖರ್ಚಿಗಾಗಿ ಕೊಡಲ್ಪಡುವ ದಾಮೂ ಷಾಯಿ ಮೊಬಲಗು ಯೇನಾದರೂ ಯಿದ್ದಲ್ಲಿ ಅದು ಸಹ ಯಿಂಡ್ಯ ಗವರ್ಮೆಂಟಿನವರಿಗೆ ಸಾಧ್ಯವಾದಷ್ಟುತ್ವರ್ಯೆದಲ್ಲಿ ತಿಳಿಸಲ್ಪಡಬೇಕೆಂದು ಕೋರೋಣವಾಗಿಧೆ.

ತಮ್ಮ ವಿಧೇಯನಾದ ಡಬ್ಳಿಯೂ. ಆರ್. ಲಾರ್ಕ್ಸ್,
ಇಂಡ್ಯ ಗವರ್ಮೆಂಟಿನ ಅಂಡರ್ ಸೆಕ್ರಿಟೆರಿ.

ಲಂಡನ್, ತಾರೀಖು 4ನೇ ಜುಲ್ಯೆ 1887.

ಇಂಡ್ಯನ್ ಮೆಡಿಕಲ್ ಇಲಾಖಾ ಬ್ರಿಗೇಡ್ ಸರ್ಜನ್‌ರಾದ (ರಜಾ ಮೇಲಿರುವ) ಡಾಕ್ಟರ್ ಈ. ಬೋನೇವಿಯವರು ಯವರಿಂದ, ವಾಯವ್ಯ ದೇಶಗಳ ವ ಅಯೋಧ್ಯ ಗವರ್ಮೆಂಟಿನ ಸೆಕರಟೇರಿಯವರಿಗೆ.

ಐಯ್ಯಾ,

ಖರ್ಜೂರದ ಗಿಡಗಳು ಕುರಿತ ವಾಯವ್ಯ ದೇಶಗಳ ವ ಅಯೋಧ್ಯ ಗವರ್ಮೆಂಟಿಗಾಗಿ, ಈ ಕೆಳಗೆ ಬರುವ ಸಂಗತಿಗಳನ್ನ ತಿಳಿಸುತ್ತೇನೆ.

2. ಉಪಯೋಗವುಳ್ಳ ಈ ಗಿಡಗಳನ್ನ ಇಂಡ್ಯ ದೇಶದೊಳಗೆ ಹೇರಳವಾಗಿ ಪ್ರಚಾರ ಪಡಿಸಿದಲ್ಲಿ ಉತ್ತರೋತ್ತರ ಜನಗಳಿಗೆ ಬಹಳ ಲಾಭಕರವಾಗುವದೆಂದು ನನಿಗೆ ಖಂಡಿತವಾಗಿ ತಿಳಿಯಬಂದಿರುವದರಿಂದ, ಅದು ಯಾವ ಯಾವ ದೇಶಗಳಲ್ಲಿ ವಿಸ್ತಾರವಾಗಿ ಬೆಳೆಯುತ್ತದೆಯೋ ಅಂಥಾ ದೇಶಗಳಿಂದಲ್ಯಾವತ್ತೂ ಅದನ್ನು ಕುರಿತ ತಪಶೀಲನ್ನು ತರಿಸಿ ಇರುತ್ತೇನೆ, ಈತಪಸೀಲುಗಳನ್ನ ಇಂಡ್ಯ ಗವರ್ಮೆಂಟಿನವರ ವ್ಯವಸ್ಥೇ ಬಗ್ಗೆ ಕಳುಹಿಸಿ ಇರುತ್ತೇನೆ.

3. ಖರ್ಜೂರದ ಸೊಸಿಗಿಡಗಳು ಉಪಯೋಗಿಸೀತೇ ಹ್ಯಾಗೆ ಯಂಬುವ ವಿಷಯದಲ್ಲಿ ಇಂಡ್ಯ ದೇಶದವರಿಗೆ ಇನ್ನೂ ಸಂಶಯ ವುಂಟಾಗಬಹುದೆಂದು, ಇದಕುರಿತು ವಿಚಾರ ಮಾಡುವದರಲ್ಲಿ ವಿಶೇಷವಾಗಿ ನಿಗೆ ಕೊಟ್ಟುರುತ್ತೇನೆ; ಆಲ್ಜೀರಿಯ ಮತ್ತು ಟ್ಯೂನಿಸ್ ಎಂಬ ಸ್ಥಳಗಳಿಗೆ ಹರಮೇಜಸ್ಟೀಯವರ ಕೌನ್ಸಲ್ ಜನರಲ್‌ರಾದ ಸರ್ ಆರ್ ಲ್ಯಾಂಬರಟ್ ಪೈಕ್ಸೇರ್‌ಯವರು ಆಲ್ಜೀರಿಯ ಯಂಬ ಸ್ಥಳದಿಂದ ಬರೆದ 1887ನೇ ಇಸವಿ ಜನವರೀ 11ನೇ ತಾರೀಖಿನ ಲೆಟರಿನಲ್ಲಿ ನಮೂದಿರುವದೇನಂದರೆ-"ನೀವು ಹೇಳಿದಂತೆಯೇ ಸೊಳಿಕೆಗಳನ್ನ ಇಂಡ್ಯದೇಶಕ್ಕೆ ಕಳುಹಿಸುವ ವಿಷಯದಲ್ಲಿ ತೊಂದರೆಯೇನೂ ಇರುವದಿಲ್ಲ, ಪರಂತು, ಆ ರೀತಿ ಅಜಮಾಯಿಷೀ ಮಾಡಬೇಕಾದವಶ್ಯಕತೆಯೇ ಇರುವದಿಲ್ಲ; ಬೀಜಗಳಿಂದಲೇ ಸೊಳಿಕೆಗಳಾಗುತ್ತವೆ, ಇಲ್ಲಿರುವ ಅರಬ್ ಜನಗಳ ಅನುಭವದ ಮೇಲೆ ತಿಳಿಯಬರುವದೇನಂದರೆ--ಬೀಜದಿಂದ ಹುಟ್ಟಿದ್ದ ಸೊಸಿಗಳ ಗಿಡದಲ್ಲಿ ಬಿಟ್ಟ ಹಣ್ಣು, ಗಿಡದ ಬುಡದಲ್ಲೇ ಕವಲು ಬಡಿದ ಸೊಸಿಗಳಿಂದ ಆದ ಗಿಡಗಳ ಹಂಣಿನಂತೆಯೇ ಚನ್ನಾಗಿ ಇರುತ್ತದೆ-ಪರಂತು, ಇದರಲ್ಲಿ ಗಂಡು ಜಾತಿಯ ಗಿಡಗಳೇ ಹೆಚ್ಚಾಗಿ ಕೇರುವ ಸಂಭವ ವುಂಟಾಗುತ್ತೆಂಬ ಬಂದು ಆಕ್ಷೇಪಣೆ ಮಾತ್ರವಿಧೆ." ಸೀ. ರೆಗ್ನಿಯರ್ ಎಂಬುವರು ಇದೇ ವಿಷಯದಲ್ಲಿ ಬರೆದ ಪುಸ್ತುಕದಲ್ಲಿ ಇರುವದೇನಂದರೆ "ಬೀಜದಿಂದ ಹುಟ್ಟಿದ ಸೊಳಿಕೆಗಳಲ್ಲಿ ಬೆರಿಕೆ ಜಾತಿಗಳು ವುಂಟಾಗುತ್ತವೆ ಅವುಗಳು ಪ್ರಾಯೇಣ ಪ್ರಸಿದ್ಧವಾದ ಬೇರೆ ಬೇರೆ ಜಾತಿಗಳಾಗಿಯೇ ನಿಂತು ಹೋಗುತ್ತದೆ, ಕೆಲವು ವೇಳೆ ಶುದ್ಧ ಹೊಸ ಜಾತಿಗಳು ವುಂಟಾಗಿ ತರುವಾಯ ಅವುಗಳ ಬುಡದಲ್ಲಿ ಕವಲುಗಳು ಹೊರಡುತ್ತವೆ."

4. ಖರ್ಜೂರದ ಸೊಳಿಕೆಗಳೇ ಉಪಯೋಗವಾದ್ದೆಂಬುವದಕ್ಕೆ ಮೇಲೆ ಹೇಳಲ್ಪಟ್ಟ ಸಂಗತಿಯೇ ನಿದರ್ಶನವಾಗಿರುತ್ತದೆ. ಆಗಲೇ ಇಂಡ್ಯ ದೇಶದಲ್ಲಿ ಇದರ ಅನುಭವ ಬಂದಿರುತ್ತದೆ. ನಾನು ಇಂಡ್ಯ ದೇಶದಿಂದ ರಜಾದ ಮೇಲೆ ಹೋಗುವದಕ್ಕೆ ಮುಂಚೆ ಅಯೋಧ್ಯ, ಮುಲ್ತಾ ಈ ರಾಜ್ಯಗಳಲ್ಲಿ ಸೊಳಿಕೆಯಿಂದ ಮಾಡಿದ ಗಿಡಗಳಲ್ಲಿ ಆದ ಮೊಳ್ಳೇ ತರಹಾನಾರ್ ಖರ್ಜೂರದ ಹಂಣುಗಳನ್ನ ಕ್ಯೂ ಸ್ಥಳದಲ್ಲಿರುವ ರಾಯಲ್ ಬಾಟ್ಯಾಗಿನ ಡೈರೆಕ್ಟರ್ ಯವರಿಗೆ ಕಳುಹಿಸಿದೆನು. ಅವುಗಳು ಈಗ ಕ್ಯೂ ಇಕನಾಮಿಕ್ ಮ್ಯೂಜಿಯಂನಲ್ಲಿ ಇರುತ್ತವೆ. ಇದಲ್ಲದೆ ಬೀಜದಿಂದ ಮೊಳಕೆ ಮಾಡಿದ ಗಿಡದ ವಿಷಯದಲ್ಲಿ ಸರ್ ಲ್ಯಾಂಬರಟ್ ಪೈಕ್ಸೇರ್‌ಯವರು ಯಾವ ಅಂಶವು ಸ್ವಲ್ಪ ಆಕ್ಷೇಪಣೀಯವಾದ್ದೆಂದು ಎಣಿಸುತ್ತಾರೋ ಅದೇ ಅಂಶ ಆರಂಭದಲ್ಲಿ ಇಂಡ್ಯ ದೇಶಕ್ಕೆ ಅಪಯೋಗಕಾರಿಯಾಗಿರುವದೆಂದು ನಾನು ಎಣಿಸುತ್ತೇನೆ. ಗಂಡು ಜಾತಿ ಗಿಡದ ಹುವ್ವಿನ ಮೇಲಿನ ಹಿಟ್ಟನ್ನ ಹೆಂಣು ಜಾತಿ ಗಿಡದ ಹುವ್ವಿನ ಮೇಲೆ ಉದರಿಸುವಣದರಿಂದ ಹೆಂಣು ಗಿಡಗಳನ್ನ ಫಲವತ್ತಾಗಿ ಮಾಡುವಂಥಾ ವಿಷಯವೇ ಇಂಡ್ಯದೇಶದಲ್ಲಿ ಸರ್ವತ್ರ ಅದ್ಯಾಪಿ ತಿಳಿಯದೇಲೇ ಇದೆ. ಆದ್ದರಿಂದ ಗಿಡಗಳಲ್ಲಿ ಹೆಂಣು ಜಾತಿಗಿಂತ ಲೂ ಗಂಡು ಜಾತಿಯೇ ಜಾಸ್ತೀಯಾಗಿದ್ದರೇನೇ ಬೆಳೆ ಆಗುವದಲ್ಲದೆ, ಬೆಳೆ ಇಷುವಂಥಾವರಿಗೆ ನಿರುತ್ಸಾಹ ಉಂಟಾಗಲಾರದು. ಕಾಲಕ್ರ

ಮೇಣ ಇಂಡ್ಯದೇಶದಲ್ಲಿಯೇ ಅನೇಕ ತರಹೇಗಳ ಖರ್ಜೂರ ಗಿಡಗಳುಂಟಾಗಿ, ಅವುಗಳಿಂದಲೇ ಕವಲು ವಡೆದ ಸೊಸಿಗಳು ತಯಾರಾಗಿ ಇತರ ದೇಶಗಳಿಂದ ದೊರೆಯುವ ಹಾಗೆಯೇ ಇಲ್ಲಿಯೂ ಹೆಂಣು ಗಿಡಗಳ ಕವಲುಸೊಸಿಗಳು ದೊರಿಯ ಬಹುದಲ್ಲದೇ ಅವುಗಳನ್ನು ಹಸನು ಸಹಾ ಮಾಡಬಹುದು, ಈಗ ಬೀಜಗಳಿಂದ ಇನ್ನೂ ವಿಶೇಷವಾದ ವುಪಯೋಗವೇನೆಂದರೆ, ಇವುಗಳನ್ನ ತರಿಸಬೇಕಾದರೆ ಅತ್ಯಲ್ಪ ಖರ್ಚು ತಗಲುವದಲ್ಲದೆ, ಕವಲುಸೊಸಿಗಳನ್ನ ಫಲವೃಕ್ಷವಾಗಿ ಮಾಡುವದಕ್ಕಿಂತಲೂ ಸುಲಭವಾಗಿ ಈ ಬೀಜದ ಸೊಸಿಗಳನ್ನ ಫಲವೃಕ್ಷವಾಗಿ ಮಾಡಬಹುದು. ಆದಕಾರಣ ಇಂಡ್ಯ ದೇಶದೊಳಗೆ ಯಾವಯಾವ ಸ್ಥಳಗಳಲ್ಲಿ ಖರ್ಜೂರ ಗಿಡಗಳನ್ನ ಬೆಳೆಯಬಹುದೋ ಆ ಸ್ಥಳಗಳಿಗೆಲ್ಲಾ ಕ್ಷೇಮವಾಗಿ ಈ ಗಿಡಗಳನ್ನ ಬಹು ಸ್ವಲ್ಪ ಖರ್ಚಿನಿಂದ ಬದಗಿಸಿಕೊಡಬಹುದು.

5. "ಟ್ಯೂನಿಸ್ ರಾಜ್ಯ ವ ಅಲ್ಲಿನ ಜನಗಳು." ಯಂಬ ಸಿ. ಹೆಸ್ಸೇವಾರ್ಟ್‌ಗಯವರಿಂದ ಬರೆಯಲ್ಪಟ್ಟ ನವೀನ ಗ್ರಂಥದಿಂದ ಖರ್ಜೂರದ ಗಿಡವನ್ನು ಕುರಿತ ಉಪಯೋಗವಾದ ಸಂಗತಿಯನ್ನ ತೆಗದು ಇದರ ಕೆಳಗೆ ಬರೆಯುತ್ತೇನೆ, ಯಾಕಂದರೆ ಖರ್ಜೂರದಗಿಡದಿಂದ ಆಗುವ ಉಪಯೋಗ ತೋರಿಸುತ್ತೇನೆ. 13ನೇ ಅಧ್ಯಾಯದ 278ನೇ ಪುಟದಲ್ಲಿ ಸದರೀಯವರು ಹೇಳುವದೇನಂದರೆ "ಆಲ್ಜಿಯರ್ಸ್ ರಾಜ್ಯದ ಒಳತನಕಲೂ ವ್ಯಾಪಿಸಿರುವ ಸೆಬ್‌ಖಾಫ್ಯಾರೋರ್ಕ್ ಯಂಬ ಜಾಗುಳ್ಳ ಚವುಳು ಪ್ರದೇಶದ ಉಭಯಪಾರ್ಶ್ವದಲ್ಲಿರುವ ದಕ್ಷಿಣಟ್ಯೂನಿಸ್ ಎಂಬ ರಾಜ್ಯದಲ್ಲೆಲ್ಲಾ ಅಲಂಕಾರವಾದ ಗರಿಗಳುಳ್ಳ ಗಿಡಗಳು ಇರುತ್ತವೆ, ಈ ಪ್ರದೇಶದಂತೆ ನೈಲ್‌ನದಿಯ ತೀರದಲ್ಲಿ ಯಾವದೂ ಇಲ್ಲ, ಸಾಗುವಳೀ ಲಾಯಖಾದ ಮೂವತ್ತು ಕಾಡು ಭೂಪ್ರದೇಶಗಳು ಸಾಲ್ಡಿಡಿದು ಬಂದರ ಪಕ್ಕದಲ್ಲಿ ಮತ್ತೊಂದಾಗಿ ಇರುತ್ತೆ ಇವು ಲವಣ ಸರೋವರಕ್ಕೂ ಹಳೀ ನ್ಯೂಮಿಡಿಯ ದೇಶದ ಅರಂಣ್ಯ ಪ್ರಾಂತ್ಯಕ್ಕೂ ಮಧ್ಯೆ ಬಂದು ಅವುಗಳನ್ನ ಬೇರೆಬೇರೆಯಾಗಿ ಮಾಡಿ ಇವೆ, ಈ ಸರೋವರವು ವರುಷದಲ್ಲಿ ಬಂಭತ್ತು ತಿಂಗಳವರಿಗೂ ಬಣಗಿಯೇ ಇರುತ್ತದೆ. ಆಫ್ರಿಕಾ ಖಂಡದೊಳಗಾಗಿ ಅತ್ಯುತ್ತಮವಾದ ಈ ಪ್ರಾಂತ್ಯಕ್ಕೆ ಬೆಲೆಜಲ್‌ಜರೀದ್ ಯಂದು ಹೆಸರು-"ಜರೀದ್" ಯಂಬ ಮಧುರವಾದ ರಸಭರಿತದ ಖರ್ಜೂರದ ಹಣ್ಣಿಗಿಂತ ಮತ್ಯಾವ ಜಾತಿಫಲವೂ ಅಧಿಕ ಬೆಲೆಯುಳ್ಳದ್ದಿಲ್ಲವು. ಮತ್ತು ಯೂರೋಪ್ ಮಾರ್ಕೆಟ್‌ಗಳಲ್ಲಿಯೂ ಈ ಹಣ್ಣುಗಳಿಗೆ ಕೇವಲ ಅಧಿಕವಾದ ಖರೀದಿ ದೊರೆಯುತ್ತದೆ" 279ನೇ ಪುಟದಲ್ಲಿ ಅವರು ಹೇಳಿರುವದೇನಂದರೆ, "ಈ ಗಿಡಗಳ ಸಂಣದಿಂದು ಸಾಧಾರಣವಾಗಿ 100 ಅಡಿಗಳ ಉದ್ದ ಬೆಳದು ಗರಿಗಳ ಮಧ್ಯ ಆಕಾಶ ಕಾಣಿಸುವ ಹಾಗೆ ಛತ್ರಿಯಂತೆ ಯಿರುತ್ತವೆ, ಈ ಗಿಡಗಳಿಗೆ ಬಿಸಲೇ ಮುಖ್ಯವಾಗಿ ಅವಶ್ಯಕವಾದದ್ದು, ಯಿವುಗಳಿಗೆ ಬಿಸಲು ಯಷ್ಟು ಬಡದಾಗ್ಯೂ ಸಹಿಸಿ, ತಮ್ಮ ಬುಡದಲ್ಲಿರುವ ಭೂಮಿಗೆ ತಂಪಾನೆ ನೆರಳು ಉಂಟು ಮಾಡುತ್ತದೆ, ಯಿದರ ದೆಸೇಯಿಂದ ಆ ನೆರಳಿನ ಜಾಗಾದಲ್ಲಿ ಅಂಜೂರು, ಕಿತ್ತಲೆ, ಗಜನಿಂಬೆ, ಬಾದಾಮ್, ಯಿಪ್ಪೆ ವ ಪಿಸ್ತಾ ಈ ಫಲ ವೃಕ್ಷಗಳು ಚನ್ನಾಗಿ ಬೆಳೆಯುತ್ತವೆ. ಯಿವುಗಳು ಖರ್ಜೂರದ ಗಿಡಗಳ ಮಧ್ಯ ದಾಯದಲ್ಲಿ ಬೆಳೆಯುತ್ತವೆ, ಬುಡದ ತೇವದಲ್ಲಿ ಭೀರು ವ ಹುಲ್ಲು ಸಮೃದ್ಧಿಯಾಗಿ ತುಂಬಾ ಬೆಳೆದಿರುತ್ತದೆ ಆದಕಾರಣ ಖರ್ಜೂರದ ಗಿಡಗಳು ಮೂರು ಬಗೆಯ ವುಪಯೋಗಳುಳ್ಳ ಫಲವೃಕ್ಷವಾಗಿ ಯಿದೆ" 280ನೇ ಪುಟದಲ್ಲಿ ಹೇಳಲ್ಪಟ್ಟಿರುವದೇನಂದರೆ "ಈ ಕಾಡು ಪ್ರದೇಶಗಳ ಫೈಕೀ ಗಾಫಾ ಯಂಬ ಪ್ರದೇಶವೇ ಬಹಳ ವಿಸ್ತಾರವಾದದ್ದು, ಯಿದರೊಳಗೆ ಸುಮಾರು 2,00,000 ವರಿವಿಗೂ ಗಿಡಗಳಿರುವ ಕಾಡು ಯಿದ್ದುಯಿದರಲ್ಲಿ ಮೂರುನಾಲ್ಕು ಸಾವಿರ ಮಂದಿ ಅರಬ್ಬರು ವ ಬರ್ಬರರುವಾಸವಾಗಿ ಯಿರುತ್ತಾರೆ. ಎಲ್‌ಗೆಟ್ಟಾರ್ ಯಂಬ ಕಾಡು ಪ್ರದೇಶದಲ್ಲಿ ಫ್ರಾಯೇಣ ನೀರು ಅಷ್ಟು ಸಮೃದ್ಧಿಯಾಗಿಲ್ಲದೇಯಿರುವದರಿಂದ ಕೇದೋಭೂಮಿಯಿಂದ ಬಂಟೆಗಳ ಮೂಲಕ ಬಹಳ ಶ್ರಮದೊಡನೆ ನೀರು ದೊರಿಯುತ್ತೆ; ಪರಂತು, ಯಿಲ್ಲಿ ವಾಸಮಾಡುವ ಕೆಲ ನೂರಾರು ಜನಗಳಿಗೆ ಖರ್ಜೂರವೇ ಜೀವನಾಧಾರವಾಗಿರುವ ಕಾರಣ ಯಷ್ಟೇ ಶ್ರಮವಾಗಲಿ ನೀರು ವದಗಿಸಿಕೊಂಡ ಹೊರ್ತು ಬೇರೆ ಉಪಾಯವಿಲ್ಲಾ. ಎಲ್‌ಗೆಟ್ಟಾರಿನಲ್ಲಿ ಒಂದು ಖರ್ಜೂರದ ಕಾಡೇ ಉದ್ದದಲ್ಲಿ ಮೂರು ಕಿಲೋಮೀಟರ್ ವರಿವಿಗೂ ವ್ಯಾಪಿಸಿರುತ್ತದೆ. "ಸೆಬಖಾ ಫ್ಯಾರೋರ್ಕ್" ಯಂಬ ಪ್ರದೇಶಕ್ಕೆ ಉತ್ತರಭಾಗದಲ್ಲೆಲ್ಲನ್ನೂ ಹದಿನೈದು ಲಕ್ಷಕ್ಕೆ ಕಡಿಮೆಯಿಲ್ಲದೇ ಖರ್ಜೂರದ ಮರಗಳೂ ಇದಕ್ಕೆ ಸಮಸಂಖೆಯುಳ್ಳ ಹಿಪ್ಪೆ, ಕಿತ್ತಲೆ, ವ ಬಾದಾಮ್ ಗಿಡಗಳೂ ಅವುಗಳ ಮಧ್ಯದಲ್ಲಿ ಯಿರುತ್ತವೆ; ಗ್ರೇಟ್‌ಷಾಟ್ ಯಂಬ ಜಂಗ್ಲೀಗೆ ದಕ್ಷಿಣವಾಗಿ "ನೆಫ್ಜಾನೀ ಯಂಬ ವಿಸ್ತಾರವಾದ ಕಾಡು ಪ್ರದೇಶಗಳಿವೆ ಯಿವುಗಳಲ್ಲಿ 300,000ಕ್ಕೂ ಹೆಚ್ಚಾದ ಖರ್ಜೂರದ ಮರಗಳುಳ್ಳ ಜಂಗ್ಲಿಯೂ ಅದರೊಳಗೆ 40 ಗ್ರಾಮಗಳಾಗಿ ಹವಿನೆಂಟು ಯಿಪ್ಪತ್ತು ಸಾವಿರದ ವರಿವಿಗೂ ಜನಗಳು ವಾಸಮಾಡುತ್ತಿದ್ದಾರೆ."

6. ಮೇಲೆ ಹೇಳಲ್ಪಟ್ಟ ಸಂಗತಿಗಳ ದೆಸೆಯಿಂದ ಮುಖ್ಯಾಂಶವಾಗಿ ತಿಳಿಯ ಬರುವದೇನಂದರೆ —(a) ಖರ್ಜೂರದ ಗಿಡವು ಚವಳು ಭೂಮಿಯಲ್ಲಿ ಚನ್ನಾಗಿಯೇ ವೃದ್ಧಿಯಾಗುತ್ತವೆ, ಖಂಡಿತವಾಗಿ ಹೇಳಬೇಕಾದ ಪಕ್ಷದಲ್ಲಿ ಯಿದರಲ್ಲಿ ನೂರಾರು ಬಗೆಗಳು ಯಿರುವದರಿಂದ, ಕೆಲವು ಜಾತಿಗಳು ಅಂಥಾ ಭೂಮಿಯಲ್ಲಿ ವೃದ್ಧಿಯಾಗುತ್ತವೆ. ಪರಂತು, ಟ್ಯೂನಿಸ್ ರಾಜ್ಯದ "ಜರಿದ್" ಯಂದು ಹೆಸರುಳ್ಳ ಖರ್ಜೂರ ಬಹಳ ಶ್ರೇಷ್ಠವಾದ್ದಂತಲೂ, ಯೂರೋಪಿಯರ್ಯ ಮಾರ್ಕೆಟ್‌ಗಳಲ್ಲಿ ಯಿವುಗಳಿಗೆ ಬಳ್ಳೀಪಲೆ ದೊರೆಯುತ್ತದೆಂದು ಹೇಳಲಿಕ್ಕೇನೂ ಸಂದೇಹವಿಲ್ಲವು. (b) ಈ ಖರ್ಜೂರದ ಫಸಲಿನಿಂದಲೇ ಜೀವಿಸುವ ಪ್ರಜೆಗಳು ಯಿಷ್ಟುಮಂದಿ ಯಂದು ಹೇಳಬಹುದು, ಆ ಜನಗಳಿಗೆ ಸಾಕಾಗಿ ಮಿಕ್ಕಂಥಾ ಖರ್ಜೂರದ ಹಣ್ಣನ್ನ ಇತರ ಪದಾರ್ಥಗಳಿಗಾಗಿ ಬದಲಾಯಿಸಿ ಕೊಳ್ಳುತ್ತಾರೆ—(c) ಖರ್ಜೂರದ ಗಿಡಗಳು ನೀರು ಮೇಲಿಗಡೆ ಯಿರುವ ಭೂಮಿಯಲ್ಲಿಯೂ, ಮತ್ತು ಬಹಳ ಶ್ರಮದಿಂದ ನೀರು ದೊರಿಯುವ ಸ್ಥಳಗಳಲ್ಲಿ ಸಹ ಬೆಳೆಯಬಹುದೆಂದು ತಿಳಿಯಬರುತ್ತದೆ. (d) ಖರ್ಜೂರದ ಗಿಡವನ್ನ ಯಾವ ಸ್ಥಳದಲ್ಲಿ ಬೆಳೆಸಬಹುದೋ ಮತ್ತು ನೀರು ಸುಲುಭವಾಗಿ ದೊರಿಯುವ ಸ್ಥಳಗಳಲ್ಲಿ ಖರ್ಜೂರದ ಗಿಡಗ

ಳ ನೆರಳಿನಲ್ಲಿ ಅಂದರೆ ಅವುಗಳ ಮಧ್ಯಜಾಗಾದಲ್ಲಿ ಕಿತ್ತಲೆಗಿಡಗಳನ್ನೂ ಗಜಲಿಂಬೇ ಗಿಡಗಳನ್ನೂ ವ ಇತರ ಫಲವೃಕ್ಷಗಳನ್ನೂ ಸಹ ಜಾಗ್ರತೆಯಲ್ಲಿ ವಿಸ್ತಾರವಾಗಿ ಬೆಳೇಮಾಡಬಹುದೆಂದು ಸಹ ತಿಳಿಯಬರುತ್ತದೆ.

7. ಇಂಡ್ಯ ದೇಶದೊಳಗೆ ರಾಜಪುತಾನಾ ವ ಸಿಂಧುದೇಶ, ಈ ರಾಜ್ಯಗಳಲ್ಲಿ ಸಿಂಧು ನದಿಯ ಉಭಯ ಪಾರ್ಶ್ವದಲ್ಲಿಯೂ, ಭೂ ಗುಣಗಳು ಹ್ಯಾಗಿವೆ ಯಂದರೆ, ಅರಬರು, ಬರ್ಬರರು ಈ ಜನಗಳಿಗೆ ಇಂಥಾ ಪ್ರದೇಶಗಳು ದೊರೆತಿದ್ದ ಪಕ್ಷದಲ್ಲಿ ಐವತ್ತು ವರುಷಗಳೊ ಳಗಾಗಿಯೇ ಆ ಪ್ರದೇಶಗಳನ್ನೆಲ್ಲಾ ಖರ್ಜೂರದ ತೋಟಗಳಾಗಿ ಮಾಡುತ್ತಿದ್ದರು.

8. ನನ್ನ ಅಜಮಾಯಿಷೀಯಲ್ಲಿ ಸ್ಪಷ್ಟವಾಗಿ ತಿಳಿಯಬಂದಿರುವದೇನಂದರೆ --ಖರ್ಜೂರದಲ್ಲಿ ಯರಡು ಬಗೆಗಳಿರುತ್ತವೆ, (1ನೇದು) ಗಿಡದಲ್ಲೇ ಮಾಗಿರೋಣ ಅಥವಾ ಕಿತ್ತಿದ ಕೂಡ್ಲೆ ಹಣ್ಣಾಗೋಣ, ಯಿದೇ ಯೂರೋಪಿರ್ಯ ಜನಗಳ ಫಲಫಲಾರೀ ಅಂಗಡಿಗಳಲ್ಲಿ ಮಾ ರಲ್ಪಡುವಂಥಾದ್ದು --(2ನೇದು) ಮೇಲೆ ಹೇಳಿದಂತೆ ಮಾಗಿರುವಂಥಾದ್ದಲ್ಲ, ಗಟ್ಟಿಯಾಗಿಯೂ ಮತ್ತು ಒಣಗಿ ನರಟಿಕೊಂಡು ಹೋಗಿ ರುತ್ತದೆ. ಅದನ್ನ ಹಾಗೆಯೇ ತಿನ್ನಲೂ ಬಹುದು ಅಥವಾ ಬಗೆಬಗೆಯಾಗಿ ಪಕ್ವಮಾಡಲೂ ಬಹುದು.

9. ಸಿನೊರರ್ಡಾ ಮ್ಯಾಕ್ಸಿಮೊ ಲಗುನಾ ಯಂಬವರು ಬರೆದ ಈ ಕೆಳಗೆ ಬರುವ ಸಂಗತಿಗಳನ್ನು ಮೆಡ್ರಿಡ್ ರಾಜಧಾನಿಯಲ್ಲಿ ರುವ ಹರ್‌ಮೇಜಷ್ಟೀಯವರ ರಾಯಭಾರದ ಸೆಕರ್‌ಬೇರಿಯವರು ದಯವಿಟ್ಟು ತಿಳಿಸಿರುತ್ತಾರದೇನಂದರೆ.

"(ಸ್ಪೈರ್ ರಾಜ್ಯದೊಳು) ಎಲಚೆ ಯಂಬ ಸ್ಥಳದಲ್ಲಿರುವ ಕೆಲವು ಮುಖ್ಯ ವ ಖ್ಯಾತಿಗಳು ಅವುಗಳ ಹಂಣಿನ ಲಕ್ಷಣದ ಮೇಲೆ ಗೊತ್ತಾಗುತ್ತವೆ--"ಕ್ಯಾಡಿಕ್ಸ್" ಯಂಬ ಹಣ್ಣು ಆಗುವಂಥಾ ಗಿಡಗಳನ್ನೇ ಬಹಳವಾಗಿ ವೋಹಿಸುತ್ತಾರೆ--ಯಿದು ಗಿಡದಮೇಲೆಯೇ ಹಣ್ಣಾಗಿ ಮಾಧುರ್ಯ ಉಂಟಾಗುತ್ತೆ. ಮಿಕ್ಕವುಗಳು ಹಳದೀ ವರ್ಣವಾಗಿ, ಘಟ್ಟಿಯಾಗಿಯೂ ತಿಳ್ಪೇಮೇಲೆ ನುಣ್ಣಗೆ ಯಿರುತ್ತವೆ. ಈ ಜಾ ತಿಹಣ್ಣುಗಳನ್ನ ತಿನ್ನಲಿಕ್ಕೆ ಯೋಗ್ಯವಾಗಿ ಮಾಡಬೇಕಾದರೆ, ಆ ಹಣ್ಣುಗಳ ಮೇಲೆ ವಿನಿಗರ್ ಯಂಬ ಕಾಡಿಯನ್ನ ಚಿಮುಕಿಸಿ ಯರಡು ದಿವಸ ದ ವರಿವಿಗೂ ಮುಚ್ಚಿಡಬೇಕು. ಆ ತರುವಾಯ ಅದು ಸೀಯಾಗಿ ಜನ್ನಾಗಿರುವದು. ಆದರೆ 5--6 ದಿವಸದ ವರಿವಿಗೇನೇ ಒಳ್ಳೇ ಸ್ಥಿತಿಯ ಲ್ಲಿದ್ದು ಅನಂತರ ಕೆಟ್ಟು ಕೊಳತು ಹೋಗುತ್ತದೆ, ಆದದರಿಂದ ಯಷ್ಟು ಆವಶ್ಯಕವೋ ಅಷ್ಟರ ಮಟ್ಟಿಗೆ ಮಾಡಿಕೊಳ್ಳುತ್ತಾರೆ. ಎಲಚೇ ಸ್ಥಳದಲ್ಲಿ ಹೆಣ್ಣು ಗಿಡದೊಳಗಿನ ಗೊಂಚಲುಗಳಿಗೆ ಗಂಡುಗಿಡದ ಹುವ್ವೆಗಳನ್ನು ಕಟ್ಟುವಂದರ ಮೂಲಕ ಫಲ ಪುಂಟುಮಾಡುವ ಪದ್ಧತಿ ಯಿದ್ದಾಗ್ಯೂ, ವಿಶೇಷವಾಗಿ ಹೆಣ್ಣುಗಿಡಗಳ ಜೊತೆಗೆ ಅಂದರೆ ಅಲ್ಪ ಘಾಸಲೆಯಲ್ಲಿ ಯರಡು ಮೂರು ಹೆಣ್ಣುಗಿಡಗಳಿಗೆ ಒಂದು ಗಂಡುಗಿಡ ದಂತೆ ನಾಟುತ್ತಾರೆ."

10. ಖರ್ಜೂರದ ಗಿಡವು ತಂಪು ಹವಾಕ್ಕೆ ಆರ್ಹವಾದ್ದಲ್ಲವೆಂತಲೂ ಗಿಡದ ಬೇರು ಭೂಮಿಯಲ್ಲಿ ಜಲಪ್ರಮಾಣದ ವರಿವಿಗೆ ಯಿಳಿ ದು, ಗಿಡದ ತಲೆ ಪೂರಾ ಬಿಸಲು ಹವಾದಲ್ಲಿ ಯಿದ್ದರೇನೇ ಹಣ್ಣು ಮಾಗುತ್ತದೆಂಬ ಒಂದು ತಪ್ಪು ಅಭಿಪ್ರಾಯ ಉಂಟಾಗಿರುತ್ತದೆ, ಯಿಂಥಾ ಅಭಿಪ್ರಾಯಕ್ಕೆ ಯರಡು ಬಗೆ ಕಾರಣಗಳಿರಬಹುದು--ಮೊದಲನೇದು-ಖರ್ಜೂರದ ಗಿಡಗಳು ಪ್ರಥಮತಃ ಮೇಲೆ ಉದಹರಿಸಲ್ಪಟ್ಟ ಸ್ಥಿತಿಯಲ್ಲಿಯೆ-ೀ ಕಾಣಬಂದು ಆ ಪ್ರಾಂತ್ಯಗಳಲ್ಲಿ ಅಂಥಾ ಸ್ಥಿತಿಯಲ್ಲಿಯೇ ವಾಸವಾಗಿದ್ದ ಅರಬ್ ಜನಗಳಲ್ಲಿ ವಿಶೇಷ ರೂಢಿಯುಂಟಾಗಿರ ಬಹುದು,--ಯರಡನೇದು, ಯೂರೋಪಿರ್ಯ ಮಾರ್ಕೆಟ್‌ಗಳಿಗೆ ಬರುವ ಅತ್ಯುತ್ತಮವಾದ ಜೆನಿಸ್‌ವಾರ್ ಖರ್ಜೂರವು ಪ್ರಾಯೇಣ ಅಂಥಾ ಸ್ಥಿತಿಯಲ್ಲಿಯೇ ಬೆಳವಂಥಾವುಗಳಾಗಿರಬಹುದು, ಆದರೆ ತಿನ್ನಲಿಕ್ಕೆ ಯೋಗ್ಯವಾಗಿಯೂ ಶೀರಕ್ಕೆ ಪುಷ್ಟಿಕಾರೀಯಾಗಿಯೂ ಮತ್ತು ಉಪ ಯೋಗವುಳ್ಳದ್ದಾಗಿರುವಂಥಾ ಖರ್ಜೂರವು ಶುದ್ಧಾಂಗ ವ್ಯತಿರಿಕ್ತವಾದ ಹವಾ ವಗೈರೇವುಳ್ಳ ಪ್ರದೇಶದಲ್ಲಿ ಬೆಳೆಯಲಾರದೆಂದು ಹೇಳುವದಕ್ಕೇ ನೇನೂ ಕಾರಣವಿಲ್ಲವು.

11. ಈಚಿಗೆ ಈಜಿಪ್ಟ್ (ಐಗುಪ್ತ) ಮಾರ್ಗವಾಗಿ ಪ್ರಯಾಣಮಾಡುವಾಗ, ರೈಲ್ವೇಯ ಪಕ್ಕದಲ್ಲಿ ಅನೇಕ ಖರ್ಜೂರದ ಮರಗ ಳನ್ನ ಕಂಡೆನು, ಅವುಗಳಲ್ಲಿದ್ದ ಹಣ್ಣುಗಳು ಅಗಲೇ ಕಿತ್ತಲ್ಪಟ್ಟಿದ್ದವು, ಆ ಮರಗಳ ಬೇರು ನೈಲ್ ನದಿಯು ಈಚಿಗೆ ಉಕ್ಕಿ ಹರಿದು ಭೂಮಿ ಮೇಲೆ ನಿಂತಿದ್ದ ನೀರಿನಲ್ಲಿ ಯಿದ್ದವು, ಇದು ಅಲ್ಲದೆ, ಈಜಿಪ್ಟ್ ದೇಶದಲ್ಲಿ ಖರ್ಜೂರದಗಿಡವು ಬಹುಕಾಲದಿಂದ ಜನರಲ್ಲಿ ರೂಢಿಯಾಗಿಯಿದೆ ಸಿ. ಯಫ್. ಗಾರ್ಡ್ನ ಕಮ್ಮಿಂಗ್‌ಯವರು ಬರೆದ "ಕಾರ್ನವಲ್ ಮಾರ್ಗವಾಗಿ ಈಜಿಪ್ಟ್‌ಗೆ" ಎಂಬ ಪುಸ್ತಕದ 137ನೇ ಪುಟದಲ್ಲಿ ರುವದೇನಂದರೆ, "ರೋಮ್ಯ ಜನಗಳ ಕಾಲದಲ್ಲಿ ಸುಮಾರು 1600 ವರುಷಗಳಿಗೆ ಮುಂಚೆ ಐಗುಪ್ತ ಜನರು ಹೆಂಚಿನ ಬಿಲ್ಲೆಯ ತುಂಡು ಗಳ ಮೇಲೆ ತೆರಿಗೆ ಸಂದ ರಸೀದಿಗಳನ್ನ ಬರೆದು ಕೊಡುತ್ತಿದ್ದರು, ಅಂಥಾ ರಸೀದಿಗಳಲ್ಲಿ ಅನೇಕ ನಫರ್ ಸುಂಕಾದನ ತೆರಿಗೆ, ಖರ್ಜೂರ ಗಿಡದ ಸುಂಕಾ, ಮುಂತಾದವುಗಳಿಗಾಗಿ ಕೊಡಲ್ಪಟ್ಟವುಗಳಾಗಿವೆ. ನಫರ ಸುಂಕಕ್ಕಾಗಿ ಕೊಡಲ್ಪಟ್ಟಿದ್ದ ಬಂದಾನೊಂದು ರಸೀದಿಯಲ್ಲಿ ಕ್ರೀಸ್ತ ಶಖದ 103--104ನೇ ವರುಷ ನಮೂದು ಯಿದೆ" ....."ಫ್ಯಾರೋಹಾ ಜನರು ಅಸ್ಸಿರಿಯವನ್ನ ತೆಗದುಕ್ಕೊಂಡ ತರುವಾಯ, ಅಂದರೇ ಕ್ರೀಸ್ತ ಹುಟ್ಟುವದಕ್ಕೆ 1500 ವರುಷಗಳ ಮುಂಚೆ, ಫ್ಯಾರೋಹಾ ಜನರಿಗೆ ಹೇರಳವಾಗಿ ಗುಗ್ಗಳವನ್ನ ಪಗದೀ ಕೊಡುತ್ತಿದ್ದರು ಅನು ಮೊವಲು, ಈ ಗುಗ್ಗಳವನ್ನೇ ಈಜಿಪ್ಟ್ ಶವಗಳಿಗೆ ಲೇಪನ ಮಾಡುತ್ತಾ ಯಿದ್ದಾರೆ ಮೃತಪಟ್ಟ ಬಡಜನರ ಶವ

ಗಳನ್ನ ಗುಗ್ಗಿಳದಲ್ಲಿ ನೆನಸಿ ಕಬ್ಬಿಣದ ಒಲೆಯ ಮೇಲೆ ಬಿಸಿಮಾಡಿ ಕಂಬಳೀಪಟ್ಟೆಯಲ್ಲಿ ಸುತ್ತಿ ಖರ್ಜೂರಗಿಡದ ಹಾಲೆಯ ಪೊರಟು ಚಾಪೆ ಯಿಂದ ಕಟ್ಟಿಬಿಡುತ್ತಾರೆ ಯಿಂತಾ ಸಾವಿರಾರು ಕವಗಳು ವರಸೆಯಾಗಿ ಭಾರೀ ಸಮಾಧಿಗಳಲ್ಲಿ ಯಿಡಲ್ಪಟ್ಟಿದ್ದವು'' ಆದಕಾರಣ, ಐಗುಪ್ತ ದೇಶದಲ್ಲಿ ಪ್ರತಿ ವರುಷವೂ ನೈಲ್ ನದಿಯು ಕ್ರಮವಾಗಿ ಉಕ್ಕಿ, ನದಿಯ ಉಭಯ ಪಾರ್ಶ್ವದಲ್ಲಿರುವ ಭೂಮಿಯಲ್ಲೆಲ್ಲಾ ಪ್ರಾಯೇಣ ಸರ್ವತ್ರ ನೀರು ನಿಲ್ಲುತ್ತಾ ಯಿರುವದಲ್ಲದೆ, ಕ್ರಿಸ್ತ ಹುಟ್ಟುವದಕ್ಕೆ ಮುಂಜಿ ನೂರಾರು ವರುಷಗಳು ಅಥವಾ ಸಾವಿರಾರು ವರುಷಗಳಿಂದಾ ಆ ದೇಶದಲ್ಲಿ ಕರ್ಜೂರದ ಗಿಡಗಳು ಸಹ ಯಿರುತ್ತವೆ ಆದ್ದರಿಂದಲೇ ವುಪಯೋಗವುಳ್ಳ ಈ ಖರ್ಜೂರದ ಗಿಡಗಳು ಕಾಲ ಕ್ರಮೇಣ, ಕು ಟ್ಟಿಂಗ ಪರಸ್ಪರ ವಿರುದ್ಧವಾದ ಉಭಯ ಸ್ಥಿತಿಗೂ ವೋಗ್ಗುವಂತಾ ನಿದರ್ಶನ ಈಜಿಪ್ಟ್ ದೇಶದಲ್ಲಲ್ಲದೆ ಮತ್ತೆಲ್ಲಿಯೂ ದೊರೆಯುವದಿಲ್ಲವು. ಯಿದರ ದೃಷ್ಟಾಂತಕ್ಕಾಗಿ, ಈಜಿಪ್ಟಿನ ಖರ್ಜೂರದ ಗಿಡವನ್ನು ಕುರಿತ ಸಂಗತಿ ತಿಳಿಸಬೇಕೆಂಬದಾಗಿ ಈಜಿಪ್ಟ್ ದೇಶದ ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖ್ಯಾಧಿಕಾರಿಗೆ ಕೇಳಿಕೊಂಡೆನು. ಇಂಡ್ಯೂ ಯಿರಿಗೇಷ್ಣ ಇಲಾಖೆಯ ಮೇಜರ್ ರಾಸ್ ಆರ್. ಇ. ಯವರು, ಯಿದರ ತಪ ಸೀಲ್ ತಿಳಿಸಲು ಸಮರ್ಥರಾದ ಉದ್ಯೋಗಸ್ಥರುಗಳಿಗೆ, ನನ್ನ ಪ್ರಶ್ನೆಗಳ ಸಹಿತ ಸರಕ್ಯುಲರನ್ನು ಕಳುಹಿಸಿದರು; ಕರ್ನಲ್ ವರ್ಮಾಕ್ರೀಫ್ ಯವರು 1887ನೇ ಇಸವೀ ಜೂನ್ 15ನೇ ಮರ್ತುಮಿನ ಲೆಟರಿನೊಂದಿಗೆ, ತಾವು ಜಮಾಯಿಸಿದ ನೋಟ್ಸ್‌ಗಳನ್ನು ಬಹಳ ಮೆಹರ್ಬಾನಗೀ ಯಿಂದ ಕಳುಹಿಸಿರುವದಲ್ಲದೆ, ನೋಟ್ಸ್ ಬರೆದ ಪ್ರತಿ ಒಬ್ಬನ ಪ್ರಾಮಾಣಿಕತೆ, ವಿಚಕ್ಷಣೆ ಮತ್ತು ಪರಿಶೋಧನಾಸಾಮರ್ಥ್ಯ ಯಿವುಗಳ ನ್ನು ಕುರಿತು ಸಂಗ್ರಹವಾಗಿ ತಮ್ಮ ಅಭಿಪ್ರಾಯ ಸಹ ತಿಳಿಸಿರುತ್ತಾರೆ ಮೇಲೆ ಹೇಳಿದ ತಪಸೀಲುಗಳನ್ನು ವೊದಗಿಸಿ ಕೊಟ್ಟ ಉದ್ಯೋಗ ಸ್ತರ್ಯಾರಾಂದರೆ:—

ಮೆ|| ಬೈರ್ಯಕಾರ್ಡೀ. ಯಿವರು ಬಹುದಿವಸದಿಂದ ರೈಲ್‌ವೇಯ ಮ್ಯಾನೇಜರು ಮತ್ತು ಪ್ರಸಿದ್ಧರಾದ ಫಲಪುಷ್ಪ ಶಾಸ್ತ್ರ ಜ್ಞರು.

ಬೆಕಾರಾ ಟೂಕ್ಲಾಬೇಗ್, ಯಿವರು ಸಿರಿಯಾದೇಶದಲ್ಲಿ ಪ್ರಸಿದ್ಧವಾದ ಅರಬ್ಬೀನ್ಯೂಸ್ ವೇಪರಿನ ಎಡಿಟರು, ಅದೇ ಕೇಮೆಯ ಬಬ್ಬ ಮನುಷ್ಯ ಈತನು ವೊಳ್ಳೇ ಅನುಭವಶಾಲಿಯಾದ ನೇಟಿವ್

ಮೆ|| ಈ. ಡಬ್ಲಿಯು ಪಿ. ಥಾಸ್ಟರ್, ಬಂಗಾಳಾ ಇರಿಗೇಷ್ಣ ಇಲಾಖಾ ಯಿವರು ಪರಮ ಜಾಗರೂಕತೆಯಿಂದಲೂ ವ ಪ್ರಯಾಸ ವಹಿಸಿ ಕೆಲಸಮಾಡುವವರು, ಯಿವರು ಹೇಳುವಂತಾ ಸಂಗತಿಗಳೆಲ್ಲವೂ ಚನ್ನಾಗಿ ಮಾಡಿದ ಪರಿಶೋಧನೆಯ ಪರ್ಯವಸಾನವೇ

ಮೆ|| ಮಾರಷಲ್ ಹಿವೆಟ್, ಯಿವರು ಈಜಿಪ್ಟ್ ದೇಶದಲ್ಲಿ ಬಹು ವರುಷಗಳಿಂದ ಯಿರುವ ಇಂಜನೀರು

ಡಾಕ್ಟರ್ ಹಾಗ್ಸ್, ಯಿವರು ಅಮೆರಿಕ್ಯಮಿಷ್ಣಗೆ ಕೀರಿದವರು ವ ಈಜಿಪ್ಟ್‌ನಲ್ಲಿ ಬಹುಕಾಲದಿಂದ ವಾಸ ಮಾಡುವರು.

ವಿಲ್ಸರ್ಡೀ, ಯಿವರು ಸ್ಕಾಟ್ ದೇಶದ ಚತುರರಾದ ಯಂತ್ರ ಸಾಧನಗಳ ಇಂಜನೀರು ಮತ್ತು ಈಜಿಪ್ಟಿನಲ್ಲಿ ಬಹು ವರುಷದ ಅನುಭವಸ್ಥರು.

ಕೆಪರ್ಟ್ ಆರ್. ಜೆಜ್. ಬ್ರೌನ್, ಆರ್. ಇ. ಬಂಗಾಳಾ ಯಿರಿಗೇಷ್ಣ ಯಿಲಾಖಾ, ಯಿವರು ಜಾಗರೂಕರಾದ ವ ಕರಾರ್‌ವಾಕಾ ಮನುಷ್ಯರು.

ಮೆ|| ಆರ್ನಾಲ್ಡ್ ಪೆರಿ, ಯಿವರು ಚಿಕ್ಕವಯಸ್ಸಿನ ಯಿಂಗ್ಲೀಷ್ ಇಂಜನೀರು.

12. ಈಜಿಪ್ಟ್ ರಾಜ್ಯದ ಪಬ್ಲಿಕ್‌ವರ್ಕ್ಸ್ ಇಲಾಖೆಯ ಸ್ಟೇಟ್ ಅಂಡರ್ ಸೆಕರಟೆರಿಯವರಾದ ಕರ್ನಲ್ ಸ್ಕಾಟ್ ವರ್ಮಾಕ್ರೀಫ್, ಆರ್. ಇ. ಯವರು ಸದರೀ ನೋಟ್ಸ್‌ಗಳನ್ನು ಕಳುಹಿಸುತ್ತಾ ನನ್ನದೊಂದು ಪ್ರಶ್ನೆಗೂ ಜವಾಬಾಗಿ ತಿಳಿಸುತ್ತಾರೇನೆಂದರೆ ''ನೈಲ್ ನದಿಯಲ್ಲಿ ಜುಲೈತಿಂಗಳೊಳಗೆ ಪರಮ ಆಶ್ಚರ್ಯವಾದ ಕ್ರಮದಿಂದ ಪ್ರವಾಹ ವುಂಟಾಗಿ, ಕಪ್ಟಂಬರ್ ತಿಂಗಳಲ್ಲಿ ಆ ರಾಜ್ಯದಲ್ಲೆಲ್ಲಾ ವ್ಯಾಪಿಸುತ್ತೆ, ಅಕ್ಟೋಬರ್ 15ರ ಸುಮಾರಿನಲ್ಲಿ ಕೈದೋಯಂಬ ಸ್ಥಳದ ಬಳಿ ಸಂಪೂರ್ಣ ಪ್ರವಾಹ ವಿರುತ್ತದೆ, ಆ ತರುವಾಯ ಅತಿಶೀಘ್ರವಾಗಿ ಯಿಳಿಯುತ್ತಾ ಬಂದು ನವೆಂಬರ್ ತಿಂಗಳ ಆದಿಭಾಗದಲ್ಲೇ ಭೂಮಿಯು ಮೇಲೆ ಉಕ್ಕಿ ಹರಿದ ನೀರೆಲ್ಲಾ ಬತ್ತಿಹೋಗುತ್ತದೆ'' ಯಿದರ ದೆಸೆಯಿಂದ ತಿಳಿಯಕೊಳ್ಳತಕ್ಕದ್ದೇನಂದರೆ ಜುಲೈ ಲಾಗಾಯತು ನವೆಂಬರ್ ತಿಂಗಳವರಿವಿಗೇನೇ ಖರ್ಜೂರವು ರಸತುಂಬಿ ಬಿಣ ವುಂಟಾಗಿ, ಹಣ್ಣು ಪಕ್ವಕ್ಕೆ ಬರುವ ಕಾಲವಾಗಿರುತ್ತದೆ, ನೀರು ಹರಿದಂತಾ ಭೂಮಿಯಲ್ಲಿ ಯಿರುವ ಖರ್ಜೂರದ ಗಿಡಗಳ ಬೇರುಗಳ್ಯಾವತ್ತೂ ಹರಿದಿರುವ ನೀರಿನೊಳಗೇನೇ ಯಿರುವವಲ್ಲದೆ, ನೈಲ್‌ನದಿಯಿಂದ್ಲ ಹರಿದ ಅಪಾರವಾದ ನೀರಿನ ದೆಸೆಯಿಂದ ಆ ಗಿಡಗಳ ಸುತ್ತಮುತ್ತಲೂ ಬಲವಾದ ತೆಂಡಿಯು ವ್ಯಾಪಿಸಿರುವದು, ವರುಷದೊಳಗೆಲ್ಲಾ ಜುಲೈ ಲಾಗಾಯತು ನವೆಂಬರ್ ವರಿವಿಗೇನೆ ಅತಿಶೀಕ್ಷಣವಾದ ಬೇಸಿಗೆಯು, ಆಗ್ಯೇ ಸರ್ವತ್ರ ಹೆಚ್ಚಾಗಿ ತೆಂಡಿಯಿಲ್ಲದೇ ಯಿದ್ದಾಗ್ಯೂ ಯಿಂಡಿಯ ದೇಶದ ವಾಯವ್ಯ ಕೇಮೆಯಲ್ಲಿ ಮಳೆಗಾಲದ ಹವಾ ಯಾವರೀತಿ ಯಿರುತ್ತದೆಯೋ ಅದರಂತೆಯೇ ಯಿಲ್ಲಿಯೂ ಯಿರುವದು.

13 ನನಿಗೆ ಬಂದು ತಲಪಿರುವ ನೋಟಿಸ್‌ಗಳ ಪ್ರಾವರ್ತ್ಯವನ್ನು ತಪ್ಪಿಸುವ ಉದ್ದಿಶ್ಯ, ಅವುಗಳನ್ನು ಸಂಗ್ರಹಣಾಗಿ ತಿಳಿಸುತ್ತೇನೆ-ಯಲ್ಲರೂ ಹೇಳುವದೇನಂದರೆ ನೀರಾವರಿ ಸಾಗುವಳೀ ಆಗಬಹುದಾದ ಖುಷ್ಕೀ ಜಮೀನಿನಲ್ಲಿರುವ ಗಿಡಗಳ ಹಣ್ಣುಗಳೇ ಅತ್ಯುತ್ತಮವಾದವು, ಮತ್ತು ಜಂಗ್ಲೀಗೆ ಹತ್ತಿದಂತೆ ಇರುವ ಗಿಡಗಳ ಹಣ್ಣು ಸಾಮಾ ಕೆಲವು ವೇಳೆ ಪೊಳ್ಳೀದಾದ್ದೇ ಯಿರುತವೆ, ಮರಳು ಭೂಮಿಯಾಗಿದ್ದು ನೀರಾವರಿ ಸಾಗುವಳೀ ಆಗಬಹುದಾದ ಜಮೀನಿನಲ್ಲಿ ಶ್ರೇಷ್ಠವಾದ ಕೆಲವು ಬಗೆ ಖರ್ಜೂರಗಳನ್ನು ಬೆಳೆಯಬಹುದು, ಜಗ್ಗಿನಲ್ಲಿದ್ದು ನೀರು ತಗಲುವಂತಾ ಗಿಡಗಳು ಕೆಟ್ಟವಲ್ಲವು, ಪರಂತು ಮೇಲೆ ಹೆಳಲ್ಪಟ್ಟಷ್ಟು ಪೊಳ್ಳೀದಲ್ಲವು, ಗಾಳಿಯ ಭೂಮಿ ಯಿವು ಥಂಡಿಯಾಗಿರಲಿ, ಉಷ್ಣವಾಗಿರಲಿ ಯಿದರಿಂದೇನೂ ವೈತ್ಯಾಸ ವಾಗಲಾರದು. ಪ್ರೌಂದು ಉಷ್ಣ ಭೂಮಿಯಾಗಿದ್ದಲ್ಲಿ, ಅವಶ್ಯಕವಾದಾಗಲೆಲ್ಲಾ ನೀರಾವರೀ ಸಾಗುವಳಿ ಮಾಡಬೇಕಾಗಿರುತ್ತೆ. ರೊಜೆಟ್ಟಾ, ಅಬೌಕರ, ರಾಮಲೇ, ಗಬ್ಬಾರಿ ಈ ಸ್ಥಳಗಳಲ್ಲಿ ಹಾಕಿದ ಗಿಡಗಳ್ಯಾವತ್ತೂ ಥಂಡೀ ಹವಾದಲ್ಲೇ ಯಿದ್ದಾಗ್ಯೂ ಹಣ್ಣುಗಳು ಪೊಳ್ಳೀ ಬಗೆಗಳದಾಗಿಯೇ ಯಿರುತ್ತವೆ, ರೊಜೆಟ್ಟಾ ಸ್ಥಳದಲ್ಲಿ ಆಗುವ ಉತ್ತಮವಾದ ಜಾತಿಗಳು ಬಾಗ್ದಾಲ್ (ಕೆಂಪು) ಮತ್ತು ಸಾಮುನಿ (ಹಳದಿ) ಯಿವು ಮರಳು ದಿನ್ನೆಗಳಲ್ಲಿ ಆಗುತ್ತವೆ ಯಂಬದಾಗಿ ಮೆ|| ಫಾಸ್ಟರ್ ಯವರು ಹೇಳುತ್ತಾರೆ, ನದಿಯ ಪ್ರವಾಹ ಬಂದು ಹೋದ ತರುವಾಯ ದಿನ್ನೀಭೂಮಿಗೆ ಜಲ ವೇರುವ ಪರಿಮಿತಿ ಹೆಚ್ಚಾಗಿರುವದ್ದರಿಂದ ಗಿಡದ ಬೇರು ಪ್ರಾಯಶಃ ಜನ್ಮಗು ಭೂಮಿಯಲ್ಲಿಯೇ ನಿರತಿರುತ್ತವೆ, ಸದರೀ ಜಮೀನುಗಳಲ್ಲಿ ನೀರಾವರಿ ಸಾಗುವಳಿಯೇ ಆಗುವದಿಲ್ಲವು, ಆದರೆ ಹಗ್ಗಿನ ಭೂಮಿಯು ಮರಳು ಮಿಶ್ರವಾಗಿದ್ದಾಗ್ಯೂ ಅಲ್ಲಿ ಖರ್ಜೂರ ಗಿಡಗಳು ವಿಶೇಷವಾಗಿ ಬೆಳೆದಿರುತ್ತವೆ, ದಾಸೆಟ್ಟಾ ನಾಲೆಯ ದೆಸೆಯಿಂದ ನೀರಾವರೀ ಸಾಗುವಳಿಗೆ ಸಲೀಸು ವುಂಟಾಗಿರುವ ಕಾರಣ ಈ ಗಿಡಗಳು ಗುಣದಲ್ಲಿ ವೃದ್ಧಿಯಾಗುತ್ತಾ ಬಂದಿವೆ, ಜಮೀನು ಹಾಗೆ ಬಿಣಗಿದಷ್ಟು ನೀರಾವರಿ ಸಾಗುವಳೀ ಅಧೀತ್ತೋ ಫಸಲೂ ಹೆಚ್ಚುವದಾಗಿ ತೋರುತ್ತದೆ. ಗೀಜೆ ಯಂಬ ಪ್ರದೇಶದಲ್ಲಿ ನದೀ ಪ್ರವಾಹ ಬಂದು ನೀರ್ಕು ನಿಲ್ಲುವ ಭೂಮಿಗಳಲ್ಲಿ ಖರ್ಜೂರದ ಗಿಡಗಳು ಯಿರುತ್ತವೆ, ವುಕ್ಕಿ ಬಂದ ನೀರು ಗಿಡದ ಬೇರನ್ನು ಕೆಡಿಸದಂತೆ 70 ದಿವಸಗಳ ವರಿಗೂ ಬೇಸಗೆ ಮೇಲ್ಭಾಗದಲ್ಲಿ ನಿಲ್ಲುವುದು, ಇದಕ್ಕೆ ಹೆಚ್ಚು ದಿನಗಳು ನಿಂತರೆ ಬೆಳೆ ಕೆಟ್ಟು ಹೋಗುತ್ತೆ. ಪರಂತು ಉಕ್ಕಿ ಬಂದ ನೀರು ನಿಲ್ಲುವ ಕಾಲವನ್ನೇ ಕಡಿಮೆ ಮಾಡುವದೇ ಉತ್ತಮ, 20 ದಿವಸಗಳಾಗಿ ಲಾಗಾಯತು 70 ದಿವಸಗಳ ವರಿಗೂ ಇರುವ ಪ್ರವಾಹವು ವಾಡಿಕೆಯಾದದ್ದು ಹೊಳೆ ಉಕ್ಕಿ ಭೂಮಿಯ ಮೇಲೆ ಹರಿಯದೇ ಯಿದ್ದರೆ ಫಸಲಿನ ತೇದಾದು ಸ್ವಲ್ಪವಾಗುವದಲ್ಲದೇ, ಹಣ್ಣಿನ ಗುಣವೂ ಕಡಿಮೆಯಾಗುವದು; ಗೀಜೆಯಲ್ಲಿ ಮೂರು ಬಗೆಯ ಖರ್ಜೂರವು ಆಗುತ್ತದೆ, ಅವು ಯಾವವಂದರೆ, ಸೇವಿ ಯಂಬದು ಅವಲ್ ತರಹಾದ್ದು ಯಿದು ಹಳದೀ ಬಣ್ಣದ ಮೇಲೆ ಯಿರುತ್ತದೆ, ಅಮ್ಮುತ್ ಯಂಬದು ಬಹಳ ಮೃದು ಜಾತಿ ಯಿದು ಮಾಗುವಾಗ ಹಳದೀ ಬಣ್ಣದಿಂದ ಪೂರಾ ಯಾಲಗೆಂಪು ಬಣ್ಣಕ್ಕೆ ತಿರಗುತ್ತೆ. ಮತ್ತು ಹಯನಿ ಯಂಬ ಕೆಂಪುಜಾತಿ ಗೀಜೆಯ ಅವಲ್ ತರಹಾದ ಖರ್ಜೂರವು ಹಳದೀ ಭೂಮಿಯಲ್ಲಿ ಆಗುತ್ತೆ. ಮರಳು ಭೂಮಿಯಾಗಿದ್ದು ನೈಲ್‌ನದಿಯ ಕಾವೇಂಜು ನಿಂತಿದ್ದ ಸ್ಥಳದಲ್ಲಿ ಅಂತಾ ವೊಳ್ಳೀ ಖರ್ಜೂರವಾಗುವದಿಲ್ಲವು." ಮೆ|| ಬಿರ್ಚ್ ಕಾರಡಿಯವರು ಹೇಳುವದೇನಂದರೆ—"ತೋಟಗಳೊಳಗೆ ಹೊಳೇ ನೀರು ನುಗ್ಗಿ ಫಸಲ್ ಖಲಲಾದ್ದು ನೋಡಿದೇನೆ ಹೆಚ್ಚು ನೀರು ಅವಶ್ಯಕ ವಿರುವದಿಲ್ಲಾ ಕಾಲ್ವೆಗಳ ಮಧ್ಯೆ ವೊಂಟೊಂಟಿ ಗಿಡಗಳು ಯಿರುತ್ತವೆ ಅಂತಾ ಗಿಡಗಳು ನೋಡಲಿಕ್ಕೆ ಚನ್ನಾಗಿಯೇ ಯಿರುತ್ತವೆ ಪರಂತು ಹಣ್ಣು ಮಾತ್ರ ಬಿಡುವದಿಲ್ಲಾ" ಈ ವೊಂಟೊಂಟಿಗಿಡಗಳು ಗಂಡು ಜಾತಿಯದೋ ಅಥವಾ ಹೆಣ್ಣುಜಾತಿಯದೋ ಯಂತಾದ್ದು ಯಂಬದಾಗಿ ಅವರು ಹೇಳುವದಿಲ್ಲ, ವೊಂದು ವೇಳೆ ಹೆಣ್ಣುಗಿಡಗಳಾಗಿದ್ದ ಪಕ್ಷದಲ್ಲಿ ಕಾಲ್ವೇ ಮಧ್ಯದಲ್ಲಿರುವ ಗಿಡಗಳನ್ನ ಹಸನು ಮಾಡುವ ಬಗ್ಗೆ ಜನಗಳು ಕಷ್ಟಪಡುತ್ತಾರೆಯೇ ಯಿಲ್ಲವೆ ಯಂಬ ಸಂಗತಿಯನ್ನೂ ನಮೂದಿಸಿರುವದಿಲ್ಲಾ, ವೊಂಟಿಗಿಡಗಳು ವೊಳ್ಳೀಜಾಗ ವ ವೊಳ್ಳೀ ಸ್ಥಿತಿಯಲ್ಲಿ ಯಿರುತ್ತವಾದಾಗ್ಯೂ ಫಲವುಟ್ಟಿಗೆ ಜಿಡುವದಿಲ್ಲಾ.—ಡಾಕ್ಟರ್ ಹಾರವಿಯವರು ಹೇಳುವದೇನಂದರೆ "ಕೆಲವು ವೇಳೆ ಖರ್ಜೂರ ಗಿಡಗಳಲ್ಲಿ ನೀರು ಹರಿದು 1 ತಿಂಗಳು ಲಾಗಾಯತು 3 ತಿಂಗಳ ವರಿವಿಗೂ ನಿಲ್ಲುತ್ತದೆ ಪರಂತು ಹೆಚ್ಚು ನೀರಿನಿಂದ ಗಿಡ ಕೆಡುವದಿಲ್ಲವು, ನೀರು ನಿಂತಿದ್ದ ಸ್ಥಳದಲ್ಲಿ ಗಿಡಗಳೊಳಗೆ ಉತ್ತಮವಾದ್ದಾಗಿಯೂ ಹೇರಳವಾಗಿಯೂ ಫಲ ಬಿಡುತ್ತೆ ಪರಂತು ಈ ಅಂಶದಲ್ಲಿ ಗಿಡಗಳಲ್ಲಿ ನೀರು ನಿಲ್ಲಲಿ ನಿಲ್ಲದೇ ಯಿರಲಿ ಯಿದರಿಂದೇನೂ ವೈತ್ಯಾಸ ಉಂಟಾಗಲಾರದು, ಖರ್ಜೂರ ಫಸಲು ಆಗಬೇಕಾದರೆ ವೊಣಗಿದ ಭೂಮಿ ಮತ್ತು ಉಷ್ಣ ಹವೆಯೇ ಅತ್ಯಾವಶ್ಯಕ ವಿರುವದಿಲ್ಲನೆಂಬದಾಗಿ ಕೆಲವರು ಹೇಳುತ್ತಾರೆ."

14. ಅಯೋಧ್ಯ ದೇಶದಲ್ಲಿ ಆಗುವ ಖರ್ಜೂರವು ಅತ್ಯುತ್ತಮವಾದ್ದೆಂಬವಕ್ಕೇನೂ ಸಂದೇಹವಿಲ್ಲವು; ಅದು ಹಾಗಿರಲಿ; ಈಜಿಪ್ಟಿನಿಂದ ಬಂದಿರುವ ಜವಾಬುಗಳಿಂದ ನನಿಗೆ ವ್ಯಕ್ತವಾಗಿ ತಿಳಿಯಬರುವದೇನಂದರೆ—ಹವಾ ಉಷ್ಣವಾಗಿಯೂ, ಭೂಮಿ ವೊಣಗಿದ್ದಾಗಿಯೂ ಯಿದ್ದು ನೀರಾವರಿಗೆ ಸಹಾ ಕಠಿಣವಾದ ಸ್ಥಳವಲ್ಲಿ ವೊಂದು ವೇಳೇ ಶ್ರೇಷ್ಠವಾದ ಖರ್ಜೂರ ಆಗಿ ಅದು ಗಿಡದಲ್ಲಿ ವೊಣಗಿ ಅದು ಬಹು ದಿವಸ ಯಿಡಲಿಕ್ಕೂ ಮತ್ತು ರಫ್ತು ಮಾಡಲಿಕ್ಕೂ ಸಹಾ ಸಂಪೂರ್ಣ ಅರ್ಹವಾದ್ದಾಗಬಹುದು, ಪರಂತು ಜವುಗು ಭೂಮಿ ವ ತಂಪು ಹವಾ ಯಿವುಗಳ ಸ್ಥಿತಿ ಅತ್ಯಧಿಕವಾಗಿ ಯಿದ್ದಾಗ್ಯೂ ಖಂಡಿತವಾಗಿ ಖರ್ಜೂರದ ಗಿಡಕ್ಕೇನೂ ಹಾನಿಯುಂಟಾಗಲಾರದು; ಯಿದೂ ಅಲ್ಲದೆ ಆಹಾರಕ್ಕೆ ಯೋಗ್ಯವಾದ ವ ದಲೆ ಯುಂಟಾಗುವ ಫಸಲೂ ಆಗುತ್ತವೆ. ಈಜಿಪ್ಟ ದೇಶದೊಳಗೆ ಖರ್ಜೂರದ ಗಿಡವು ಜನಗಳಿಗೆ ತಿಳಿದು ಅನುಭವಕ್ಕೆ ಬಂದು ಸಾವಿರಾರು ವರುಷಗಳಾಗಿರುತ್ತವಷ್ಟೆ, ಈ ಮಧ್ಯೆ ಅನೇಕ ಬಗೆಗಳ ಖರ್ಜೂರದ ಗಿಡಗಳುಂಟಾವವು ಯಿದಕ್ಕೇನೂ ಸಂದೇಹವಿಲ್ಲ, ಯಿವುಗಳ ವೈಕೀ ಕೆಲವು ಜಾತಿಗಳು ವೊಣಗಿದ ಭೂಮಿಗೂ ಉಷ್ಣ ಮಾಕ್ಕೂ ಅರ್ಹವಾದವು, ಮಿಕ್ಕಾದ ಬಗೆಗಳೋ ಭೂಮಿಯ ವ ಹವಾ ಲಕ್ಷಣ ಯಂತಾದ್ದಾಗಿಯೇ ಯಿರಲಿ ತಾಯುತ್ತವೆ. ಈ ಜಿಪ್ಟ ದೇಶದ ಕೆಲವು ಬಗೆಗಳು ಯಿಂಡ್ಯದೇಶದ ತಂಪು ಹವಾ ಪ್ರದೇಶಗಳಲ್ಲಿ ಸಹ ಅಂದರೆ ಬೊಂಬಾಯಿ ಬಂಗಾಳಾ ಈ ಪ್ರಾಂತದಲ್ಲಿ ಆಗಬಹುದಾದ ಸಂಭವ ಕಾಣುತ್ತೆ.

15. ನನಿಗೆ ಬಂದಿರುವ ಎಲ್ಲ ಜವಾಬುಗಳಿಂದಲೂ ತಿಳಿಯಬರುವದೇನಂದರೆ—ವಾಡಿಕೆಯಾಗಿ ಗುತ್ತಿಯ ಖರ್ಜೂರವೆಲ್ಲವೂ ಯೀಕಕಾಲದಲ್ಲಿ ಗಿಡದ ಮೇಲೆ ಹಣ್ಣಾದ್ದೇ ಯಿಲ್ಲವು, ಕೇವಲ ವೊಣಗಿದ ಭೂಮಿಯಲ್ಲಿಯೂ ಅರಣ್ಯದ ಕಿನಾರೆಯಲ್ಲಿಯೂ ಗುತ್ತಿಯ ಹಣ್ಣುಗಳೆಲ್ಲ ಮಾಗುವವರಿವಿಗೂ ಗಿಡದಲ್ಲಿಯೇ ನಿಲ್ಲಿಸಿಡುತ್ತಾರೆ, ಆದರೆ ಪ್ರಾಯೇಣ ಯಲ್ಲಕಡೆಯಲ್ಲೂ ದಫೆಗಳಾಗಿ ಕೈಯಿಂದಲಾದರೂ ಬಿಡಿಸುತ್ತಾರೆ. ಅಥವಾ ಗಿಡದ ಕೆಳಗೆ ಬಲೆಕಟ್ಟಿ ಅದರೊಳಗೆ ಗುತ್ತಿಯನ್ನಲ್ಲಾಡಿಸಿ ಹಣ್ಣು ಉದರಿಸುತ್ತಾರೆ. ಗಿಡದಿಂದ ತೆಗದ ಈ ಹಣ್ಣನ್ನ ಹಾಗೆಯೇ ತಿನ್ನುವದೂ ಉಂಟು ಅಥವಾ ಬಿಸಲಿನಲ್ಲಿ ವೊಣಗಿಸಿ ಅನೇಕನಿಧವಾಗಿ ತಯಾರ್ಮಾಡುವದೂ ಉಂಟು. ಪ್ರಾಯೇಣ ಗೊನೆಯು ಕೆಂಪು ಅಥವಾ ಹಳದೀ ಬಣಕ್ಕೆ ತಿರುಗಿದಾಗ ಗುತ್ತಿಗುತ್ತಿಯಾಗಿಯೇ ಕಿತ್ತಲ್ಪಟ್ಟು ಅಂಗಡಿಗಳಲ್ಲಿ ಮಾರಲ್ಪಡುತ್ತವೆ, ಅದು ವಗರಾಗಿಯೂ ಕೀಯಿಲ್ಲದೇ ಯಿದ್ದಾಗ್ಯೂ ಜನಗಳು ಅದನ್ನೇ ತಿನ್ನುತ್ತಾರೆ, ವೊಂದು ಖರ್ಜೂರದ ಗೊನೆಯೊಳಗೆ ಅಲ್ಲಲ್ಲೊಂದು ಹಂಣಾಗುವದಕ್ಕೆ ಆರಂಭವಾದ ಕೂಡ್ಲೆ ಆ ಗೊನೆಯನ್ನೇ ಕತ್ತರಿಸಿ ತಂದು ನೇಟೀವ್ ಮತ್ತು ಯೂರೋಪಿಯರ್ ಜನಗಳು ತಮ್ಮ ತಮ್ಮ ಮನೆಗಳೊಳಗೆ ತೂಗಕಟ್ಟುತ್ತಾರೆ. ಅದರೊಳಗಿನ ಖರ್ಜೂರವು ಮಾಗುತ್ತಾ ಬಂದಹಾಗೆಲ್ಲಾ ಕಿತ್ತು ತಿನ್ನುತ್ತಾರೆ, ದೋರ ಹಣ್ಣಿನಿಂದ ವೊಂದು ಬಗೆಯ ಮುರಬ್ಬಾ ಆಗುತ್ತದೆ ಅಥವಾ ಅದಕ್ಕೆ ವುಪ್ಪುಹಾಕಿ ತೊಕ್ಕಿನಂತೆಯಾದರೂ ಮಾಡಿ ತಿನ್ನುತ್ತಾರೆ, ಗೊನೆಯಲ್ಲಿ ವೊಣಗಿ ಬತ್ತಿದ ಹಣ್ಣನ್ನ ಕಿತ್ತು ಹಾಕಿ ವುಳಿದ ಹಣ್ಣುಗಳಿಗೆ ಬಲವಿರುವಂತೆ ಮಾಡುತ್ತಾರೆ.

16. ಒಳ್ಳೀ ಜನ್ನಾಗಿ ಬೆಳದ ಗಿಡದಲ್ಲಿ ಅದರ ಸ್ಥಳ ಲಕ್ಷಣ ಮತ್ತು ಕಾಪಾಡುವ ರೀತಿಯನ್ನನುಸರಿಸಿ 50ರ ಲಾಗಾಯತು 500ವರ್ಷ ತೂಕದವರಿವಿಗೂ ಖರ್ಜೂರ ವಾಗುತ್ತದೆ, ಖರ್ಜೂರದ ಗಿಡವು 80 ವರುಷದ ಲಾಗಾಯತು 100 ವರುಷಗಳ ವರಿವಿಗೂ ಯಿರುತ್ತದೆ, ಹಾಲೀ ಯಿರುವ ಯಿನ್ನೂ ಕೆಲವು ಗಿಡಗಳು I0 0—200 ವರುಷಗಳಿಂದಲೂ ಯಿವೆ, ಪ್ರಾಯೇಣ ಬಲವಾದ ಗಾಳೀ ಮಳೆಯ ಪೆಟ್ಟಿನಿಂದಲೇ ಗಿಡಗಳು ಸಾಯುತ್ತವೆ. ಚನ್ನಾಗಿನಮಾತ್ರ ಕಾಪಾಡಿದಲ್ಲಿ ಗಿಡಗಳು ಯಿರುವ ವರಿವಿಗೂ ಪ್ರತಿ ವರ್ಷವೂ ಹೇರಳವಾಗಿ ಫಲ ಕೊಡುತ್ತವೆ.

17. ಖರ್ಜೂರದ ಗಿಡದ ಬೇಸಾಯವು ಈಜಿಪ್ಟ್ ದೇಶದಲ್ಲಿ ವಿಸ್ತಾರವಾಗಿ ನಡೆಯುತ್ತದೆ, ಫಲವೂ ಬಹಳವಾಗಿ ಆಗುತ್ತೆ ಬಹುಶಃ ನೇಟಿವ್ ಜನಗಳೆಲ್ಲರೂ ದೋರಹಣ್ಣಿನ ಮೇಲೂ ಮತ್ತು ಒಣಗಿದ ಹಣ್ಣಿನ ಮೇಲೂ ಸಂಪೂರ್ಣವಾಗಿ ಮೂರು ತಿಂಗಳ ವರಿವಿಗೂ ಜೀವಿಸುತ್ತಾರೆ, ಅವರುಗಳಿಗೆ ಸಾಧಾರಣ ರೊಟ್ಟಿಗಿಂತಲೂ ಖರ್ಜೂರವೇ ಅಗ್ಗವಾಗಿ ಇದೆ, ಬಡಜನರು ಖರ್ಜೂರದ ಬೀಜಗಳನ್ನು ಜಮಾಯಿಸಿ ಇಟ್ಟುಕೊಂಡು ಒಲೆಗೆ ಸವುದೆಯಂತೆ ಉಪಯೋಗಿಸಿಕೊಳ್ಳುತ್ತಾರೆ. ವಿನಿಗರ್ ವ ಸ್ಪಿರಿಟ್ ಸಾರಾಯಿ ಈ ಹಂಣಿನಿಂದ ತಯಾರಾಗುತ್ತದೆ ಹೆಚ್ಚಾದ ಅಕ್ಕರೆಯಿಂದ ಕಾಪಾಡಿದ ಗಿಡಗಳಲ್ಲಿ ಜೆಜ್ಜಾಗಿಯೂ ಮತ್ತು ಒಳ್ಳೀ ಫಸಲಾಗುತ್ತದೆ, ಈ ಗಿಡಕ್ಕೆ ಹಕ್ಕಿಯ ಹಿಕ್ಕಿ ಕುದರೆಯ ವ ಇತರ ಗೊಬ್ಬರವನ್ನ ವಿಶೇಷವಾಗಿ ಕೊಡುತ್ತಾರೆ. ಹಳೀ ಗ್ರಾಮಗಳ ಕಸವನ್ನೂ ಸಹ ಸಾಕುತ್ತಾರೆ. ಇದು ಇಂಡ್ಯದ ಬೇಸಾಯಗಾರರು ನೊನ ಯೆಂದು ಕರಿಯುತಕ್ಕ ಪದಾರ್ಥಕ್ಕೆ ಸದೃಕವಾದದ್ದು ಮತ್ತು ನೈಟ್ರೇಟ್ ಆವ್ ಪೊಟ್ಯಾಷ್ ಯಂಬ ಬಂದು ಬಗೆಯ ಕ್ಷಾರದ ಸತ್ತುವಾಗಿಯೇ ಇರಬಹುದು. ಈಜಿಪ್ಟಿನ ಕೆಳ ಪ್ರದೇಶದಲ್ಲಿ ಗೊಬ್ಬರವೇ ವಿಸ್ತಾರವಾಗಿ ನುಪಯೋಗಿಸಲ್ಪಡುತ್ತದೆ. ಮೇಲ್ ಪ್ರದೇಶದಲ್ಲಿ ಖರ್ಜೂರ ಗಿಡಗಳ ಮಧ್ಯೆ ಭೂಮಿಯನ್ನ ಉಳೋಣದರ ದೆಸೆಯಿಂದಲೇ ಅವಶ್ಯಕವಾದ ಹಸನಾಗುತ್ತೆಂದು ಯಿಣಿಸಲ್ಪಟ್ಟಿದೆ ವರುಷದಲ್ಲಿ ನೂರು ಗಿಡಗಳ ಕೆಲಸ ಒಬ್ಬ ಮನುಷ್ಯನಿಗೆ ಮೂರು ತಿಂಗಳ ವರಿವಿಗೆ ಇರುತ್ತೆ ಗಿಡದಲ್ಲಿ ಬಣಗಿ ಹೋದ ಗರಿಗಳು ವರುಷಕ್ಕೆ ಬಂದು ದಫಾ ಕಿತ್ತುಹಾಕಲ್ಪಡುತ್ತವೆ.

18. ಆ ರಾಜ್ಯದಲ್ಲಿ ಈ ಕೆಲಸದ ಅನುಭವಶಾಲಿಯಾದ ನೇಟೀವ್ ಆಯಾಯ ಬಗೆಗಳ ಹೆಸರುಗಳನ್ನ ತಿಳಿಸುತ್ತಾನೆ, ಅವ್ಯಾವ ವೆಂದರೆ—ಹಯ್ಕಾನಿ, ಅರಾಬಿಯೇಟ್, ಕಬಾಬಿ, ಫಿಂದಿಐಷಾ, ಜಾನಾರ್, ಸಗ್ನಿ, ರವಾಕವ್, ಸಾಮುನಿ, ಜಗಲಾಲ್, ಛತೀಯಿ, ಆಮ್ಮೆನಸರ ದ್ದೀರ್, ಅಲೀಲಿ, ಅಮ್ರಿ, ಜಿಹಯತ್, ಆಸಾಲಾ, ವೊಕರಬಾ, ಜೆಮರಿ, ಚೋಕಾರ್, ಖೊಯಿಮಘಲ್, ಆಬ್ರೀಮಿ, ಸೊಕಾತ್, ಹಾಫಲ್ಗನೇದಿ, ಬೆಜಲಿನಾಕಾ, ಸೊಬ್ಯಾಜಿನಾಬ್, ಗಾಂದಿಲಾ, ಖೋದ್ರಾಯಿ, ಎಲ್‌ಸಿವಿ, ಎಲ್‌ವಾಹಿ, ಮುಂತಾದ ಇತರ ಜಾತಿಗಳು. ಈಜ್ಪೆಕಿ ಶ್ರೇಷ್ಟವಾದವು ಯಾವವಂದರೆ ಜೆಗಲಾಲ್, ಎಲ್‌ಅಮ್ರಿ ಎಲ್‌ಸೊಕಾತ್, ಎಲ್‌ಗಾಂದಿಲಾ, ಎಲ್‌ಖೋದ್ರಾಯಿ, ಎಲ್‌ಅಬ್ರೀಮಿ, ಮತ್ತು ಎಲ್‌ಸೀವಿ, ಗಾಜಾಲಿ, ಹಯಾನಿ, ಅಮ್ರಿ ಅಕ್‌ಲಾಲಿ ಬೈಯದೆಲ್‌ಗಮಾಲ್ ಬಿಂಕ್‌ಐಷಾ ಎಗಲಾನಿ ಈ ಜಾತಿಗಳು ಉತ್ತಮವಾದ್ದೆಂದು ಮೆ॥ ಬಿ. ಎ. ಕಾರಡಿಯವರು ಹೇಳುತ್ತಾರೆ. ಸ್ಕಾಟ್‌ಲೆಂಡ್ ದೇಶದ ಮೆಕಾನಿಕಲ್ ಇಂಜನಿಯರವರಾದ ವಿಲ್ಸರ್ಬೇಯವರು ಗೀಜೇ ಪ್ರದೇಶದಲ್ಲಿ ಜೊಳೆಯ ನೀರು ಉಕ್ಕಿ ಹರಿಯದ ಮರಳು ಭೂಮಿಯಲ್ಲಿ ಬೆಳೆಯುವಂಥಾ ಎತ್ತೆಗೆಂಪುಬಣವುಳ್ಳ ಸಣ್ಣದಾದ ಅಮ್ಹುತ್ ಎಂಬದೇ ಎಲ್ಲಕ್ಕಿಂತಲೂ ಉತ್ತಮವಾದ್ದೆಂದು ಹೇಳುತ್ತಾರೆ, ಅದಕ್ಕೆ ಎರಡನೇ ತರದ್ದು ಅಮ್ರಿ ಎಂಬದು ಇದು ಒಳ್ಳೀ ದೊಡ್ಡದು ಮಾಗಿದ ನಂತರ ಕಪ್ಪಾಗಿರುವದು ಮಾಗಿದ ಈ ಹಂಣು ಲಿವ್ಯಾಂಟ್ ಗ್ರೀಸ್ ಮತ್ತು ಯೂರೋಪಿನ ಇತರ ಪ್ರಾಂತ್ಯಕ್ಕೆ ರಫ್ತಿಗೆ ಬದಗುತ್ತದೆ. ಯಿದು ಷಿರಖ್ಯೆ, ಘಾ ಕೂಸ್ ಸಾಲಹ್ಯೆ ಮತ್ತು ಅಬೂಕೇಬಕ್ ಈ ಸ್ಥಳಗಳಲ್ಲಿ ಬೆಳೆಯುತ್ತದೆ ಸಾಮುನಿ ಎಂಬದು ಮಾಗಿದ ಮೇಲೆ ಹಳದೀ ಬಣ ವುಳ್ಳದ್ದಾಗಿ ದೊಡ್ಡದಾಗಿರುವದು.ಇದು ರಾಸೆಟ್ಟು ಎಂಬ ಸ್ಥಳದ ಆಜಾಬಾಜಾದಲ್ಲಿ ನದೀ ನೀರು ಹರಿಯದ ಮರಳು ಭೂಮಿಯಲ್ಲಿ ಬೆಳೆಯುತ್ತೆ. ಜೆಗಲಾಲ್ ಎಂಬದು ಒಳ್ಳೆ ಜಸನಾದ ಖರ್ಜೂರ ಇದನ್ನ ಹಂಣು ಆಗುವದಕ್ಕೆ ಮುಂಚೆ ಕೆಂಪಾಗಿರುವಾಗಲೇ ಕಿತ್ತಿ ತಿನ್ನುತ್ತಾರೆ. ಇವನ್ನ ರಾಸೆಟ್ಟು ಸ್ಥಳದ ಮರಳು ಭೂಮಿಯಲ್ಲಿಯೂ ಬೆಳೆಯುತ್ತಾರೆ ಇದರ ಕೆಳಗೆ ನಮೂದಾಗುವ ಖರ್ಜೂರವು ಮಧ್ಯಮ ತರಹೇಗಳಾದ್ದೆಂದು

ತಿಳಿಸುತ್ತಾರೆ ಅವು ಯಾವವೆಂದರೆ, ಹಯನೀ ಎಂಬ ವರಟು ಜಾತೀ ಹಂಣು ಇದನ್ನ ಸಾಧಾರಣವಾಗಿ ಮಾಗುವದಕ್ಕೆ ಮುಂಚೆ ಕೆಂಪಾ ಗಿರುವಾಗಲೇ ತಿನ್ನುತ್ತಾರೆ ಇದು ಕ್ಯಾಲಿಯೋಬಿಯ ಎಂಬ ಸ್ಥಳದಲ್ಲಿ ಜೇಡೀ ಭೂಮಿಯು ಮೇಲೆ ಕೆಲವು ವೇಳೆ ವಿೀ ನೀರು ಉಕ್ಕಿ ಹರಿ ಯುವದುಂಟು ಬಿಂತಂಆಐ ಎಂಬ ಸಂಣ ಖಜೂರವನ್ನು ಕೆಳ ಪ್ರಾಂತದ ಎಲ್ಲಾ ಕಡೆಯಲ್ಲೂ ಮತ್ತು ನೀರಾವರಿ ಕಲ್ಪಿಸಿರುವ ಡಿಸ್ಟ್ರಿಕ್ಟುಗಳ ಲ್ಲೂ ಆಗುತ್ತದೆ. ಅಗಲಾನೀ ಎಂಬ ಜಾತಿಯು ಜೇಡೀ ಭೂಮಿಯಲ್ಲಿಯೂ ವ ಷರಓ ನು ಪ್ರದೇಶದ ನೀರಾವರಿ ಸಾಗುವಳೀಯಾಗುವ ಸ್ಥಳಗಳಲ್ಲಿಯೂ ಆಗುತ್ತದೆ.

19. ಮೆ|| ಬಿರ್ಚ ಕಾರ್ಡಿಯವರು ಕೆಲಸದಲ್ಲಿ ವೊಳ್ಳೇ ಅನುಭವಶಾಲಿಯಾಗಿಯೂ ಫಲಪುಷ್ಪಶಾಸ್ತ್ರಜ್ಞರಾಗಿಯೂ ಇರುತ್ತಾರಾ ಗಿ ಅವರ ನೋಟ್ಸಿನಲ್ಲಿ ಇದರಡಿ ಬರುವ ತಪಸೀಲು ಪ್ರಯೋಜನಕಾರಿಯಾಗಿರುವದು, ೀ ಖಹಮ್ಮದ್ ಆರ್ಕೆ ಅಥವಾ ಸಾಲಜೈ ಈ ಸ್ಥ ಳದಿಂದೆ ಸೊಸಿಗಳನ್ನ ತರಿಸಬೇಕು, ಅವು ತಾಯಿ ಮರಗಳಿಂದ ವಿಂಗಡಿಸಿ ತೆಗದವಾಗಿರಬೇಕು. ಇವು ಸಾಧಾರಣವಾಗಿ ಸುಮಾರು ಮೂರು ವರುಷದ ಸೊಸಿಗಳಾಗಿದ್ದು 4--5 ಅಡಿ ಎತ್ತರ ವಿರುತ್ತವೆ, ಈ ಸೊಸಸಿಗಳು ಖಜೂರ ಗಿಡದ ನಾರಿನಲ್ಲಿ ಸುತ್ತಲ್ಪಟ್ಟಿದ್ದು ಜನವರೀ ಫಿಬ್ರವರೀ ತಿಂಗಳಲ್ಲಿ ಗುಣಿಗಳಲ್ಲಿಡಲ್ಪಡುವವು. ಇನ್ನುಗಳನ್ನ ಬೊಂಬಾಯಿಗೆ ಜಹಜಿನಲ್ಲಿ ತರಬಹುದು, ೀಗ ಸೊಸಿಗಳು ಚನ್ನಾಗಿಯೀ ಇರುತ್ತವೆ. ಸು ತ್ತಲ್ಪಟ್ಟಿರುವ ಬೇರುಗಳಿಗೆ ಮಾತ್ರ ದಿನಕ್ಕೊಂದಾವರ್ತಿ ತ್ಯಾವೆ ವುಂಟಾಗುವಂತೆ ನೀರು ಹ ಕುತ್ತಲಿರಬೇಕು, ಸ್ಥಳಕ್ಕೆ ಬಂದು ತಲಪಿದ ಮೇಲೆ ಆಳವಾದ ಬಂದೊಂದು ಗುಣಿಯಲ್ಲಿ ಬಂದೊಂದು ಸೊಸಿಯಂತೆ ಕೆಳಗಿನ ಗರೀ ಮಟ್ಟಕ್ಕೆ ನಾಟಬೇಕು, ಆನಂತರ ನಾಟಿದ ಸೊಸಿಗೆ ಹಳೀ ಚಾಪೆ ಸುತ್ತಿ ನಾಲ್ಕಾತ್ತು ದಿವಸಗಳ ವರಿಗೂ ಪ್ರತಿ ದಿನವೂ ನೀರು ಹಾಕುತ್ತಾ ಆ ತರುವಾಯ 4 ತಿಂಗಳ ವರಿವಿಗೂ ದಿನಬಿಟ್ಟು ದಿನ ನೀರು ಹಾಕುತ್ತಾ ಬರಬೇಕು. ಆಗ್ಯೆ ಬೇರುಗಳು ವೃದ್ಧವಾಗಿ ಯಿಳಕೊಂಡು ಜೀವಿತವಾಗುವದಲ್ಲದೆ ಗಿಡಗಳು ಇತರ ಫಲವೃಷ್ಟಿಯಂತೆ ಎಣಿಸಲ್ಪಡುವದು. ಪೂರಾ ಬೆಳದ ಮರವು ನೀರಿಲ್ಲದೇ ಸತ್ತು ಹೋಯಿತೆಂಬದು ಯಂದಿಗೂ ಯಿಲ್ಲ---ವೊಬ್ಬಬ್ಬ ಖಜೂರಗಳನ್ನ (ಅಂದರೆ ಖ ಜೂರದ ಗಿಡದ ಬ್ಯಾಸಾಯಗಾರರು) ಸೊಸಿಗಳಸಂಗಡ ಕರೆಯಿಸಿ ಮೇಲೆ ಹೇಳಿದ ಕ್ರಮವನ್ನ ನಡಿಸಬೇಕು, ಅವರು ಈ ಗಿಡಗಳ ವಿಷಯ ದಲ್ಲಿ ಯಾವ ಕ್ರಮ ನಡಿಸಬೇಕೋ ಅವನ್ನ ಯಿಂಡ್ಯ ಜನಗಳಿಗೆ ಯರಡು ಮೂರು ವರುಷಗಳೊಳಗಾಗಿ ಕಲಿಸುತ್ತಾರೆ. ಸುಮಾರು ಐದು ವ ರುಷದೊಳಗಾಗಿ 20,000 ಈಜಿಪ್ಟಿನ ಗಿಡಗಳನ್ನ ಮೇಲೆ ಹೇಳಿದ ಮೇರಿಗೆ ತಯಾರ್ಮಾಡಿದಲ್ಲಿ (ಈಜಿಪ್ಟ ದೇಶದ ಲೆಖ್ಕಾಚಾರದ ಮೇರಿ ಗೆ) ಮೊಬಲಗು 10,000ಪೌಂಗಳು ಹುಟ್ಟುವದೇ ಆಗುವದು. ಈ 20,000 ಗಿಡಗಳಿಗೆ ಲಾಗವಾಡು ದರ ಗಿಡಕ್ಕೆ ವೊಂದು ಷಿಲಿಂಗ್ (ಅರ್ಧ ರೂಪಾಯಿ) ಮೇರಿಗೆ 1000ಪೌಂಗಳು ಆಗುತ್ತದೆ. ಅವುಗಳ ಉತ್ಪತ್ತಿಯ ತೇದಾದು 1000 ಟ್ಗಳಾಗುತ್ತವೆ; ಸದರೀ (20,000) ಗಿ ಡಗಳನ್ನ ಯಿಂಡ್ಯಾ ದೇಶಕ್ಕೆ ತಂದು ನಾಟಲಿಕ್ಕೆ ಯಲ್ಲಾಕೇರಿ 3000ಪೌಂಗಳು ಖರ್ಚು ತಗಲುತ್ತೆ. 200 ಎಕರೆಯುಳ್ಳ ಖಂಜರ್ ಬೀಳು ಭೂಮಿಯಲ್ಲಿ ಮೇಲ್ಕಂಡ 20,000 ಗಿಡಗಳನ್ನ ಹಾಕಬಹುದು, ಯಿಂತಾ ಭೂಮಿಯನ್ನ ಸ್ವಲ್ಪಕ್ರಯಕ್ಕೆ ಪಡೆಯಬಹುದು, ಗಿಡಗಳ ಫಲಕ್ಕೆ ಬರಲು 4—5 ವರುಷಗಳಾಗುವ ಸಂಗತಿಯನ್ನೂ ವ ಅವುಗಳಿಗಾಗಿ ಹಾಕಲ್ಪಡುವ ಎಂಜವಾಳದ ಬಡ್ಡೀಯನ್ನೂ ಆಲೋಚಿಸಿ ನೋಡಲಾಗಿ ಮೊವಲ್ ಕಳೆ ಬರುವಾಗ ಪ್ರಾಯಶಃ ಮೊಬಲಗು 6000ಪೌ ವರಿವಿಗೆ ವೊಟ್ಟು ಖರ್ಚು ತಗಲುವದು, ವೊಂದುವೇಳೆ ಅರವಾ ಸಿ ಗಿಡಗಳು ಸತ್ತು ಹೋಗುತ್ತವೆಂತಲಾಗಲಿ ಅಥವಾ ಫಲಬಿಡದೆ ಗೊಡ್ಡು ಗಿಡಗಳಾಗುತ್ತವೆಂತಾಗಲಿ ಹೇಗೆದಾಗ್ಯೂ ಬಾಕೀ ಉಳಿದ 10,000 ಗಿಡಗಳಲ್ಲಿ ಅರ್ಧಫಲದಿಂದಲೇ ಮೊದಲನೇ ವರುಷದ ಉತ್ಪತ್ತಿ 5000ಪೌಂಗಳು ಹುಟ್ಟುವದು. ಖಜೂರದ ಗಿಡದಲ್ಲಿ ಮೊದಲು ಮೊದಲು ಫಸಲು ಹೆಚ್ಚಾಗುವದಿಲ್ಲ, ಮೊದಲನೇ ವರುಷದ ಫಲ ಬಿಡುವಾಗ ಕೆಲವು ಗಿಡಗಳಲ್ಲಿ ವೊಂದು ಗೊನೆ ಕೆಲವು ಗಿಡಗಳಲ್ಲಿ ಯರು ಡು ಗೊನೆಗಳು ಈ ಮೇರಿಗೆ ಬಿಡುತ್ತವೆ. ಗಿಡಗಳಿಗೆ 15 ವರುಷಗಳು ಆಗುವ ವರಿವಿಗೂ ಗೊನೆಗಳು ಹೆಚ್ಚೆಚ್ಚಾಗಿ ಬಿಡುತಲಿರುತವೆ, ಅಂದರೆ 10ರ ಲಾಗಾಯತು 12 ಗೊನೆಗಳ ವರಿವಿಗೂ ಆಗುತ್ತವೆ;" ಚನ್ನಾಗಿ ಕಾಸುಡಿದರೆ ಹೀಗೆಯೇ ವೊಂದುಗಿಡವು 100 ವರುಷಗ ಳ ವರಿವಿಗೂ ಅಥವಾ ಯಿನ್ನೂ ಜೆಚ್ಚಾದ ಕಾಲದ ಮಟ್ಟಿಗೂ ಪ್ರತಿ ವರುಷವೂ ಗೊನೆಗಳನ್ನ ಬಿಡುತ್ತಿರುವದೆಂದು ಸಹಾ ಮೆ|| ಬಿರ್ಚ ಕಾರ್ಡಿಯವರು ಹೇಳಿರಬಹುದು.

20. ಇಂಡ್ಯಾ ದೇಶದೊಳಗೆ ಪ್ರಾಯಶಃ ಖಜೂರದ ಬೇಸಾಯವನ್ನ ಯಾರೂ ಯಿಷ್ಟು ಭಾರೀಯಾಗಿ ಮಾಡಲಿಕ್ಕೆ ಯತ್ನಿಸ ಲಾರರು, ರಾಜಪುಟಾನಾ ದೇಶದ ಕೆಲವು ಅರಸುಗಳೇ ಆಗಲಿ, ಹೈದರಾಬಾದ್ ನೈಜಾಮರೇ ಆಗಲಿ ಸ್ವಲ್ಪಮಟ್ಟಿಗೆ ಅಜಮಾಯಿಷೀ ತರೀಕ ಬೇಸಾಯ ನಡಿಸಲಿಕ್ಕೆ ಮನಸ್ಸು ಮಾಡುವರು ಅಸಂಭಾವ್ಯವೇನು ಅಲ್ಲಾ; ಸೊಸಿಗಳೊಂದಿಗೆ ವೊಬ್ಬಿಬ್ಬ ಈಜಿಪ್ಟ ಜನರನ್ನ ಈಜಿಪ್ಟನಲ್ಲಿ ಯಾವರೀತಿ ನಡಿಸುತ್ತಾರೋ ಆ ಮೇರಿಗೆ ಗಿಡಗಳ ಬೇಸಾಯವನ್ನೂ ಮಾಡಿಸಬಹುದು, ಸರ್ ಆರ್ ಶಿಂಪಲ್ ಯವರು ಬರೆದ "ಹೈದರಾ ಬಾದ ಜರ್ನಲ್" ಯಂಬ ಬಕ್ಕರಿನಲ್ಲಿ ಹೇಳುತ್ತಾರೇನಂದರೆ—"ಮಂಜುರಾ ನದಿಯ ಕೊರಕಲಿನ ಕೆಳಭಾಗಕ್ಕೂ ಮತ್ತು ಮಂಜುರಾ ಭೀಮಾ, ಕೃಷ್ಣಾ ಈ ನದಿಗಳಿಗೂ ಮಧ್ಯವಲ್ಲಿ ನೈಜಾಮರವರ ದರ್ಖದೇಶದ ಮುಖ್ಯವಾದ ಪ್ರದೇಶ ಸಿರುತ್ತವೆ—ಈ ಪ್ರದೇಶವು ನಾನಾರೀತಿ ಯಾದ ಸೀಮೆಗಳೂ ಬಗೆಬಗೆಯಾದ ಭೂಮಿಗಳೂ, ಮತ್ತು ಜೇರೆಜೇತೆ ಹವಾ ವುಳ್ಳದ್ದಾಗಿಯಿದೆ. ಅಂದರೆ ದಟ್ಟಗುಟ್ಟಗಳು ತುಂಬಿವೆ ಅಥ ವಾ ಭೂಮಿ ಕೆಲವು ಕಡೆ ತಗ್ಗಾಗಿಯೂ ಕೆಲವು ಕಡೆ ಮಿಟ್ಟೆಯಾಗಿಯೂ ಯಿರುತ್ತದೆ, ಇದಕ್ಕೆ ಪೂರ್ವಭಾಗದಲ್ಲಿ ಪೂರ್ವಿಕ ರಾಜ ರುಗಳಿಂದ ಕಲ್ಪಿಸಲ್ಪಟ್ಟ ಸರೋವರಗಳು ಅಂದರೆ ಕೆರೆಗಳು ಸಾಲಾಗಿರುತ್ತವೆ. ಕೆರೆಯ ನೀರಾರಂಭ. ವಿಷಯದಲ್ಲಾದರೋ ಇಂಡ್ಯಾ ದೇಶ

ದೊಳಗೆಲ್ಲಾ ಯಿದು ಕೇವಲ ರಮಣೀಯ್ಯವಾದ ಪ್ರದೇಶವು, ಹಿಂದೂಸ್ತಾನಿನಲ್ಲೆಲ್ಲಾ ಬಹಳ ದೊಡ್ಡದಾದಂತಾ ಪಖಾಲ್ ಯಂಬ ಕೆರೆಯು ಈ ಪ್ರದೇಶದಲ್ಲಿರುತ್ತದೆ" ಸದರೀಯವರು ಯಿನ್ನೂ ಹೇಳುತ್ತಾರೇನಂದರೆ–"ಭೂಲಕ್ಷಣಶಾಸ್ತ್ರೀಯ್ಯ ಹೇಳುವಲ್ಲಿ ಉತ್ತರ ಪಶ್ಚಿಮ ಈ ಪ್ರಾಂತ್ಯ ಕರೇ ಛಾಯದ ನೊರಜು ಮತ್ತು ಘಟ್ಟ್ರೇಗಡ ಭೂಮಿ ವಿಶೇಷವಾಗಿ ಯಿದೆ. ಮಿಕ್ಕ ಕಡೆ ಅಂದರೆ ಆಗ್ನೇಯ ಪ್ರಾಂತದಲ್ಲಿ ಸ್ವಲ್ಪ, ಕೆಂಪು ಬಣ್ಣದ ಬಿಂಗಚ್ಚಿ ಗಿರೋಲ್ ಕಲ್ಲಿನ ಭೂಮಿಯೂ ವ ಹುಳಿಮಣ್ಣಿನ ಭೂಮಿ ಸಹಾ ಯಿರುತ್ತದೆ. ಈ ಭೂಲಕ್ಷಣ ಭೇದಗಳ ದೆಸೇ ಯಿಂದ ಕೃಷಿಯಲ್ಲಿಯು ಮತ್ತು ಕೆಳೆಯಲ್ಲಿಯೂ ಪ್ರಬಲವಾದ ವೈತ್ಯಾಸಗಳು ಉಂಟಾಗುತ್ತದೆ. ಹ್ಯಾಗೆಂದರೆ ಕೃಷ್ಣರೇಗಡೆ ಭೂಮಿಯಲ್ಲಿ ಹತ್ತಿ, ಗೋಧಿ ಕೆಳೆಗಳಾಗುತ್ತವೆ–ಕೆಬ್ಬೇ ಭೂಮಿಯಲ್ಲಿ ಸಂಪೂರ್ಣವಾಗಿ ಕೆರೆಯ ನೀರಾವರಿ ಆಸರಾದಿಂದಲೇ ಕಾರ್ತೀಕ ವೈಶಾಖಿ ಭತ್ತದ ಕೆಳೆಯಾಗುತ್ತದೆ. ಆದ್ದರಿಂದಲೇ ತಟುಕಗಳಿರುವ ಈ ರಾಜ್ಯದಲ್ಲಿ ಕೂಡ ಕಟ್ಟಲ್ಪಟ್ಟ ಕೆರೆಗೆಳಿರುವ ಡಿಸ್ಟ್ರಿಕ್ಟುಗಳೊಳಗಣ ಮೆಥು ಭೂಮಿಯೇ ಸರ್ವೋತ್ಕೃಷ್ಟವಾದುದಾಗಿ "ಯಿದೆ" ಮೇಲೆಕಂಡ ವಿವರಣೇ ಮೇರಿಗೆ ಈಜಿಪ್ಟ್ ದೇಶದ ಖರ್ಜೂರದ ಗಿಡಗಳ ವ್ಯವಸಾಯವನ್ನ ವಿಸ್ತಾರವಾಗಿ ಚನ್ನಾಗಿ ಅಭಿವೃದ್ಧಿಯಾಗುವಂತೆ ನಡಿಸಲಿಕ್ಕೆ ನೈಜಾಮರವರ ರಾಜ್ಯವು ಸ್ವಾಭಾವಿಕವಾಗಿಯೇ ಮಾಡಿ ಯಿಟ್ಟಂತೆ ತೋರುತ್ತದೆ, ಗಿಡಗಳು ಬೇರುಬಿಟ್ಟುಕೊಂಡ ತರುವಾಯ ಕೆರೆಯ ನೀರನ್ನ ಹೀರುವಣದರಿಂದ ಭೂಮಿಯೊಳಗೆ ತಂಪು ಉಂಟಾಗಿ ಗಿಡಗಳು ಸೊಂಪಾಗಿರುತ್ತವೆ; ಈ ಸೊಸಿಗಿಡಗಳ ಮಧ್ಯದಲ್ಲಿ ಹತ್ತಿ ಗೋಧಿಯನ್ನ ಸಹ ಕೆಳೆಯಬಹುದು. ಗಿಡಗಳು ಬಹಳ ದೊಡ್ಡದಾದನಂತರ, ಟ್ಯೂನಿಸ್ ರಾಜ್ಯದಲ್ಲಿ ಕೆಳದಂತೆ, ಅವುಗಳ ನೆರಳಿನಲ್ಲಿ ತಿತ್ತಲಿ, ಸಪ್ಪರಿಲಿಂಬೆ, ಅಂಜೂರ ವಗೈರೇ ಗಿಡಗಳನ್ನ ಬೆಳೆಸಬಹುದು, ನೈಜಾಮರ ರಾಜ್ಯವನ್ನ ನಾನು ನೋಡಿರುವದರಲ್ಲಿ, ನೀರಿಗೆ ಅನುಕೂಲವಾಗಿರುವ ಹಸನು ಭೂಮಿಯೊಳಗೆ ಯೂರೋಪಿಯರ್ಸ ದೇಶದ ಅನೇಕ ಬಗೆ ಫಲವೃಕ್ಷಗಳನ್ನ ಚನ್ನಾಗಿ ಕೆಳೆಯಬಹುದು. ಖರ್ಜೂರದ ಗಿಡಗಳ ವಿಷಯದಲ್ಲಾದರೋ ಈಜಿಪ್ಟ್ ರಾಜ್ಯದಲ್ಲಿಯ ಮಿಟ್ಟೇ ಭೂಮಿಯಲ್ಲಿ ಕೆಳೆಯುವಂತಾ ವ ತಗ್ಗು ಭೂಮಿಯಲ್ಲಿ ಕೆಳೆಯುವಂತಾ ಗಿಡಗಳು ಸಹಾ ಕೆಳೆಯಬಹುದಲ್ಲದೆ ಕಾಲಾನುಕಾಲದಲ್ಲಿ ದಖ್ಖಣರಾಜ್ಯದ ಜನಗಳು ಕೆಲವು ತಿಂಗಳ ಮಟ್ಟಿಗೂ ಖರ್ಜೂರದಿಂದಲೇ ಜೀವಿಸಬಹುದು.

21. ಖರ್ಜೂರ ಗಿಡಗಳನ್ನ ಕುರಿತು ನಾನು ಪರಿಶೋಧನೆ ಮಾಡಿದ್ದರಲ್ಲಿ ಖರ್ಜೂರದ ಗಿಡವು ಇತರ ಅನೇಕ ಗಿಡ ಜಾತಿಗಳಿಗೆ ವಿರುದ್ಧವಾಗಿ ಅಂದರೆ, ಹೊಂದು ಸ್ಥಳಕ್ಕೇನೇ ನಿಯತವಾದ ಪುತ್ತು ಬದಲುವಣಿಗೆ ಸಾಧ್ಯವಿಲ್ಲದಂತಾ ತರುಜಾತಿ ಯಂಬದಾಗಿ ಪ್ರಸ್ತಕದಲ್ಲಿ ಬರೆಯಲ್ಪಟ್ಟಂತೆಯೂ, ಅದೇ ಮೇರಿಗೆ ಜನಗಳು ನಂಬಿ ಇದ್ದಂತಾ ಪ್ರಬಲವಾದ ತಪ್ಪು ಅಭಿಪ್ರಾಯವನ್ನ ಘರ್ಷಣೆಯಿಂದ ನಿವಾರಣೆ ಮಾಡಲಿತ್ನಿಸಿದೆನು, ನಿಜಸ್ಥಿತಿಗಳಿಂದ ವ್ಯಕ್ತಪಡುವದೇನಂದರೆ ಈಜಿಪ್ಟ್ ವ ಇತರ ಸ್ಥಳಗಳಲ್ಲಿ ಕೆಲವು ಪ್ರದೇಶಗಳೊಳಗೆ ಮಾತ್ರ ಕಾಲಕ್ರಮೇಣ ಖರ್ಜೂರದ ಗಿಡವು ತನಿಗೆ ಪರಿವೇಷ್ಟ್ಯವಾದ ಸಂದರ್ಭಗಳಿಗೆ ಹೊಂದಿ ಹೋಗಿರುತ್ತದೆ. ಅರಣ್ಯದ ಹವಾದಲ್ಲಿ ಸೊಂಪಾಗಿ ಬೆಳೆಯುವಂತಾ ಗಿಡವು ನದೀ ನೀರು ಉಕ್ಕಿ ತಿಂಗಳಗಟ್ಟಲೆ ನೀರು ನಿಲ್ಲುವ ಭೂಮಿಯಲ್ಲಿ ಸಹಾ ಬೆಳೆಯುವದಕ್ಕೆ ವಗ್ಗಿ ಇರುತ್ತದೆ, ಸಮುದ್ರದ ಆಸ್‌ಪಾಸ್‌ನಲ್ಲಿಯೂ ಚವಳು ಭೂಮಿ ಮೊದಲಾದವುಗಳಲ್ಲಿಯೂ ಕೂಡ ಆಗುತ್ತದೆ, ಕೆಲವು ಸ್ಥಳಗಳಲ್ಲಿ ಅತ್ಯುತ್ತಮವಾದ ಖರ್ಜೂರವೂ ಇನ್ನೂ ಕೆಲವು ಕಡೆ ಮಧ್ಯಮ ತರದ ಖರ್ಜೂರವಾಗುತ್ತದೆ ಯೇವಂಚ ಇದು ಬೆಳೆಯುವ ಎಲ್ಲ ಕಡೆಯಲ್ಲೂ ಜನಗಳಿಗೂ ಅವರ ದನಗಳಿಗೂ ಸಹ ಜೀವನಾಧಾರವಾಗಿ ಇದೆ. ಖರ್ಜೂರದ ಗಿಡದಂತೆ ಎಲ್ಲಾ ಸಂದರ್ಭಗಳಿಗೂ ವಗ್ಗುವಂತಾ ಮತ್ತೊಂದು ಗಿಡವಿದ್ದೀತೆಂದು ನಾನು ದೂರ ಹುಡಕಬೇಕಾದವಶ್ಯಕವೇ ಇಲ್ಲ. ಭತ್ತದ ಬೆಳೆಯೇ ಖಂಡಿತವಾಗಿ ಉಷ್ಣಹವಾದಲ್ಲಿ ಬೆಳೆಯತಕ್ಕದ್ದಾದದರಿಂದ ಬರವೂ, ಸಿಲೋನ್, ದಕ್ಷಿಣಹಿಂದುಸ್ತಾನ ವ ಬಂಗಾಳ ಈ ದೇಶಗಳಲ್ಲೀ ವಿಸ್ತಾರವಾಗಿ ಬೆಳೆ ಆಗುತ್ತದೆ, ಆದಾಗ್ಯೂ ಭತ್ತದ ನೂರಾರು ಬಗೆಗಳ ಪೈಕಿ ಕೆಲವು ಬಗೆ ಭತ್ತಗಳು ಉತ್ತರ ಹಿಂದುಸ್ತಾನಿನ ಹವಾಕ್ಕೆ ವಗ್ಗಿ ಪಷಾವರ ವರಿನಿಗೂ, ವ್ಯಾಪಿಸಿ ಹಿಮಾಲಯಪರ್ವತಗಳ ಕೊರಕಲುಗಳು ಆಫ್‌ಗಾನಸ್ತಾನ, ಇಟಲಿ, ಅಮರಿಕಾ ಮುಂತಾದ ಖಂಡಗಳ ಹವಾಗಳಿಗೆ ಸಹಾ ವಗ್ಗಿ ಇರುತ್ತದೆ, ಖರ್ಜೂರದ ಗಿಡದಲ್ಲಿಯೂ ನೂರಾರು ಬಗೆಗಳು ಇವೆ, ಇದ್ದಾಗ್ಯೂ ಕೆಲವು ಬಗೆ ಗಿಡಗಳು ಉಷ್ಣ ಹವಾಕ್ಕೂ ಕೆಲವು ತಂಪು ಹವಾಕ್ಕೂ, ಇನ್ನು ಕೆಲವು ಮರಳು ಭೂಮಿ, ಜೇಡಿಭೂಮಿ, ಯಾ ಚವಳು ಭೂಮಿ ಇತ್ಯಾದಿಗಳಿಗೆ ವಗ್ಗಿ ಇರುತ್ತವೆ.

22. ಖರ್ಜೂರದ ಬೆಳೆಯು ಈಜಿಪ್ಟಿನಲ್ಲಿ ಸೆಪ್ಟಂಬರ್ ತಿಂಗಳೊಳಗೆ ಪಕ್ವಕ್ಕೆ ಬರುತ್ತದೆ. ಈಜಿಪ್ಟ್ ದೇಶದ ಬಾಬತು ಕೆಲವು ಒಳ್ಳೇ ಜಾತಿಗಳ ಬೀಜವನ್ನ ತರಿಸುವದು ಯುಕ್ತವೆಂದು ಇಂಡಿಯಾ ಗವರ್ಮೆಂಟಿನವರು ಎಣಿಸುವ ಪಕ್ಷಕ್ಕೆ ಕರ್ನಲ್ ಸ್ಕಾಟ್ ಮಾಕ್ರೀಫ್ ಯವರು ಬರೆಯಲ್ಪಟ್ಟ ತಪಶೀಲುಗಳನ್ನೂ ತಿಳಿಸುತ್ತೇನೇನಂದರೆ–"ಇಂಡ್ಯ ದೇಶಕ್ಕೆ ಬೀಜಗಳನ್ನ ಹೇರಳವಾಗಿ ಕಳುಹಿಸಬೇಕಾದರೆ, ಗವರ್ಮೆಂಟ್ ಮೂರೀಫತ್ತು ಕೆಲಸ ನಡಿಸತಕ್ಕದ್ದು ಬಹಳ ಉತ್ತಮವಾದ್ದೆಂದು ಎಣಿಸುತ್ತೇನೆ. ಸರ್ ಎಲಿವ್ರ್ ಲೇರಿಂಗ್ ಯವರಿಗೆ ಸರಕಾರಿಯಾಗಿ ಕೇಳಿಕೊಂಡಲ್ಲಿ ಅವರು ಈ ವಿಷಯವನ್ನ (ಪೂರ್ವ ಬೂಂಬಾಯಿ ರೆವಿನ್ಯೂ ಸರ್ವೇಯಲ್ಲಿ ಯಿದ್ದು) ಈ ಸ್ಟೇಟ್ ರಾಜ್ಯಕ್ಕೆ ಕಮ್ಮಿಷನ್ನರಾಗಿರುವ ಮೆ|| ಜೇ. ಬಿ. ಗಿಬ್ಸ್‌ರ್ಯವರು ವ ಡೈರಾಸಾನಿಹೆ ಕಂಟ್ರೋಲರ್ ಮೆ|| ಹ್ಯಾಮಿಲ್ಟರ್ ಲ್ಯಾಂಗ್ ಸಿ. ಎಂ. ಜಿ. ಯಿವರುಗಳಿಗೆ ಪ್ರೊಪ್ಪಿಸುವರು—ಯಿವರಿಬ್ಬರಲ್ಲಿ ಯಾರೇ ಆಗಲಿ, ಖರ್ಜೂರದ ಬೀಜ ಯೆಷ್ಟು ಬೇಕಾದಾಗ್ಯೂ ವೊಗೆಗಿಸಿಕೊಡಲಿಕ್ಕೆ ಸಮರ್ಥರಾಗಿ ಯಿದ್ದಾರೆ. ಯಿದಕ್ಕಾಗಿ ಜಾಜವೀಖರ್ಚು ತಗಲುವದು ಅಥವಾ ಪ್ರಸಿದ್ಧರಾದ ವ ಘನವನ್ನು ಪಡಿದಿರುವ ಕೆಲವು ವ್ಯಾಪಾರಿಗಳಾಗಿ ಅಲೆಗ್ಜಾಂಡ್ರಿಯ ಸ್ಥಳದಲ್ಲಿರುವ ಮೆಸ್ಸಿಯರ್ಸ್ ಕಾರವರ್ ಅಂಡ್ ಕಂಪೆನಿ ಯಿಂತಾ ಭೂರೀ ಹೌಸಿನ ಮೂರೀಫತ್ತು ಇಂಡ್ಯ ಗವರ್ಮೆಂಟಿನವರೇ ತರಿಸಿಕೊಡಲೂ ಬಹುದು."

23. ಅಯೋಧ್ಯೆಯ ಖರ್ಜೂರದ ಗಿಡಗಳ ಹೊರತಾಯಿ ಇಂಡ್ಯ ದೇಶದೊಳಗೆ ಫಲಕೊಡುವ ಖರ್ಜೂರದ ಗಿಡಗಳು ಅನೇಕ ಸ್ಥಳಗಳಲ್ಲಿ ಬಂಟಿಯಾಗಿಯೂ ಎರಡೆರಡಾಗಿಯೂ ಈ ಮೇರಿಗೆ ಇರುತ್ತವೆ. ಇವು ಪ್ರಥಮತಃ ಮಕ್ಕಾದಿಂದಲೂ ವ ಅರಬ್ಬಿಯ ದೇಶದ ಇತರ ಸ್ಥಳಗಳಿಂದ ತರಲ್ಪಟ್ಟಿಂತಾವುಗಳಾಗಿವೆ. ಆದಾಗ್ಯೂ ಆ ಗಿಡಗಳು ಇಲ್ಲೊಂದು ಅಲ್ಲೊಂದು ಇರುವದ್ದರಿಂದ ಖರ್ಜೂರದ ಗಿಡವನ್ನ ಸರಿಯಾದ ಕ್ರಮದಿಂದ ಬೇಸಾಯ ನಡಿಸಲಿಕ್ಕೆ ತಕ್ಕಷ್ಟು ಪ್ರೋತ್ಸಾಹ ಪುಂಟುಮಾಡಿರುವದಿಲ್ಲ ಈಜಿಪ್ಟ್ ವ ಪರಷಿಯಾದೇಶದ ಖರ್ಜೂರದ ಬೇಸಾಯಗಾರರು ಇದರ ಕ್ರಮ ಚನ್ನಾಗಿ ಬಲ್ಲವರಾದ್ದರಿಂದ ಅವರು ಇಂಡ್ಯ ದೇಶದ ಸೇಟಿವ್ ಜನರಿಗೆ ಅದನ್ನ ಜೋಡೆಮಾಡಿ ಕೊಡಲು ಅತ್ಯಂತೋಪಯೋಗಿಗಳಾಗಿರುವರು ಇಂತಾ ಪ್ರಯೋಗವುಳ್ಳ ಗಿಡವನ್ನ ಇಂಡ್ಯ ದೇಶದೊಳಗೆ ವಿಸ್ತಾರವಾಗಿ ಪ್ರಚಾರಪಡಿಸುವಣವು ಸಾಧ್ಯವಾದದ್ದೆಂಬ ವಿಷಯದಲ್ಲೂ ಅದು ಜನಗಳಿಗೆ ಬಹಳ ಪ್ರಯೋಗಕರವಾದ್ದೆಂಬ ವಿಷಯದಲ್ಲೂ ಸಹಾ ನನಿಗೇನೂ ಸಂಶಯವಿರುವದಿಲ್ಲವು, ಇದು ಅಲ್ಲದೆ ಕ್ಯೂ ಎಂಬ ಸ್ಥಳದಲ್ಲಿರುವ ರಾಯಲ್ ಗಾರ್ಡ್ಸ್ ಎಂಬ ತೋಟದ ಸೈರೆಕ್ಟ್ಯರಾದ ಮೆ|| ಥಿಸೆಲ್ಟನ್ ಡೈಯರ್ ಯವರು ಬರದಿರುವ 1886ನೇ ಇಸವಿ ನವಂಬರ್ 15ನೇ ತಾರೀಖಿನ ಲೆಟರಿನಲ್ಲಿ ಹೇಳುವದೇನಂದರೆ "ಈ ವ್ಯವಸಾಯವು ಪೂರಾ ಫಲಕಾರಿಯಾದದ್ದೆಂದು ನಾನು ಖಂಡಿತವಾಗಿ ತಿಳಿದಿರುತ್ತೇನೆ" ಪುನಃ ನನಿಗೆ ತೋರುವದೇನಂದರೆ ಇಂಡ್ಯ ದೇಶದಲ್ಲಿ ಸಾಧಾರಣ ಕಾಲದಲ್ಲಿ ಖರ್ಜೂರದ ಕ್ರಯ ಪ್ಯಾಗಾದರೂ ಇರಲಿ ಕ್ಷಾಮ ಕಾಲದಲ್ಲಂತೂ ಖರ್ಜೂರದ ಬೆಳೆಯು ಖಂಡಿತವಾದ್ದೆಂಬುವದಕ್ಕೇನೂ ಸಂಶಯವಿಲ್ಲವು.